1. ಪ್ರಕಟಣೆ :

ವಿಷಯ: ವಿಧಾನ ಸಭೆ ಹಾಗೂ ವಿಧಾನ ಪರಿಷತ್ತಿನ ಸದಸ್ಯರು ಆರೋಗ್ಯ ತಪಾಸಣೆ ಶಿಬಿರದ ಪ್ರಯೋಜನವನ್ನು ಪಡೆದುಕೊಳ್ಳುವ ಬಗ್ಗೆ

ಸಭಾಧ್ಯಕ್ಷರು: ಒಂದು ಪ್ರಕಟಣೆ ಇದೆ.

ಪ್ರಕಟಣೆ

ವಿಧಾನ ಸಭೆ ಹಾಗೂ ವಿಧಾನ ಪರಿಷತ್ತಿನ ಸನ್ಮಾನ್ಯ ಸದಸ್ಯರುಗಳಿಗೆ ಆರೋಗ್ಯ ತಪಾಸಣೆ ಶಿಬಿರ ದಿನಾಂಕ 23ರಿಂದ ನಡೆಯುತ್ತಿದೆ. ಈ ಶಿಬಿರವು ದಿನಾಂಕ 27ಕ್ಕೆ ಪೂರ್ಣಗೊಳ್ಳುತ್ತದೆ. ವಿಧಾನಸಭೆಯ 121 ಗೌರವಾನ್ವಿತ ಶಾಸಕರುಗಳು ಇದುವರೆಗೂ ಆರೋಗ್ಯ ತಪಾಸಣಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುತ್ತಾರೆ. ದಯವಿಟ್ಟು ಉಳಿದ ಶಾಸಕರು ಇಂದು ಮತ್ತು ನಾಳೆ ಆರೋಗ್ಯ ತಪಾಸಣಾ ಶಿಬಿರದಲ್ಲಿ ಪಾಲ್ಗೊಂಡು ಶಿಬಿರದ ಪ್ರಯೋಜನ ಪಡೆಯಲು ಕೋರಿದೆ.

2. ವರದಿಯನ್ನೊಪ್ಪಿಸುವುದು

ಶ್ರೀ ಎ.ಟಿ. ರಾಮಸ್ವಾಮಿ (ಅಧ್ಯಕ್ಷರು, ಜಂಟಿ ಸದನ ಸಮಿತಿ) : ಸನ್ಮಾನ್ಯ ಸಭಾಧ್ಯಕ್ಷರೆ, ಬೆಂಗಳೂರು ನಗರ ಜಿಲ್ಲೆಯಲ್ಲಿ ಒತ್ತುವರಿಯಾಗಿರುವ ಸರ್ಕಾರಿ ಜಮೀನು ಕುರಿತು ಜಂಟಿ ಸದನ ಸಮಿತಿಯ ಮಧ್ಯಂತರ ವರದಿಯ ಭಾಗ-2ನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಸಭಾಧ್ಯಕ್ಷರು: ಮಂಡಿಸಲಾಯಿತು.

3. ವಿತ್ತೀಯ ಕಾರ್ಯ ಕಾಲಾಪಗಳು

2007-08ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ ಮುಂದುವರೆದ ಚರ್ಚೆ

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೆ, ಈ ದಿವಸ ಸರ್ಕಾರದ 28 ಇಲಾಖೆಗಳ ಬೇಡಿಕೆಗಳ ಮೇಲಿನ ಅನುದಾನವನ್ನು ಮಂಜೂರು ಮಾಡುವುದಕ್ಕೆ ವಿಧಾನಸಭೆಯಲ್ಲಿ ಈಗ ಚರ್ಚೆ ನಡೆಯುತ್ತಿದೆ. 28 ಇಲಾಖೆಗಳಿಗೆ ಅನುದಾನವನ್ನು

ಖರ್ಚು ಮಾಡುವುದಕ್ಕೆ ಈ ಸದನ ಅನುಮತಿ ಕೊಡಬೇಕು. ಅದರ ಒಟ್ಟು ಮೊತ್ತವಾದ 41,000 ಕೋಟಿ ರೂಪಾಯಿಗಳಿಗೆ ಈ ಸದನ ತನ್ನ ಒಪ್ಪಿಗೆ ಕೊಡಬೇಕಾಗಿದೆ. ಒಪ್ಪಿಗೆ ಕೊಡತಕ್ಕಂಥ ಸಂದರ್ಭದಲ್ಲಿ ಈ ಸದನದಲ್ಲಿ ಹಿಂದೆ ಒಂದು ಸಂಪ್ರದಾಯವಿತ್ತು. ಒಂದೊಂದು ಇಲಾಖೆ ಮೇಲೆ ಮೊದಲು ಚರ್ಚೆಯಾಗಿ, ಅದಕ್ಕೆ ಉತ್ತರ ಕೊಟ್ಟ ನಂತರ ಇನ್ನೊಂದು ಇಲಾಖಾ ಬೇಡಿಕೆಯನ್ನು ಮಂಡಿಸುವ ಸಂಪ್ರದಾಯ ನಮ್ಮ ವಿಧಾನಸಭೆಯಲ್ಲಿತ್ತು. ಬೇರೆಲ್ಲಾ ಕಡೆಗಳಲ್ಲೂ ಇದ್ದದ್ದು ಹಾಗೆಯೇ. ಆದರೆ, ಇವತ್ತು ಏನಾಗಿದೆಯೆಂದರೆ, ಯಾವುದೇ ಇಲಾಖೆ ಬಗ್ಗೆಯೂ ಸದನದಲ್ಲಿ ವಿವರವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲದೇ ಇರತಕ್ಕಂಥ ಪರಿಸ್ಥಿತಿ ಒಂದು ಕಡೆ ನಿರ್ಮಾಣವಾಗಿದೆ. ಕೆಲವು ಸಂದರ್ಭಗಳಲ್ಲಿ ಆಡಳಿತ ಪಕ್ಷಕ್ಕೆ ಅದರಿಂದ ಭಾರೀ ಅನುಕೂಲವಾಗಿದೆ. ವಿರೋಧ ಪಕ್ಷಗಳೂ ಒಂದು ರೀತಿಯ ಅನುಕೂಲ ಪಡೆಯುವುದಕ್ಕೆ ಪ್ರಯತ್ನ ಮಾಡುತ್ತವೆ. ಇನ್ನೊಂದು ಕಡೆ, ಚರ್ಚೆಯಾಗದೇ ಬೇಡಿಕೆಗಳಿಗೆ ಒಪ್ಪಿಗೆ ತೆಗೆದುಕೊಂಡು ಹೋದರೆ ನಮಗೆ ತಲೆನೋವು ಇರುವುದಿಲ್ಲ ಎನ್ನುವ ಪ್ರಯತ್ನದಲ್ಲಿ ಆಡಳಿತ ಪಕ್ಷ ಹೇಳುವುದಕ್ಕೆ ಪ್ರಯತ್ನಿಸುತ್ತಿದೆ. ಇದರಿಂದಾಗಿ ಇಡೀ ಇಲಾಖೆಗಳ, ಸರ್ಕಾರದ ಹಣಕಾಸು ನಿರ್ವಹಣೆ ಮಾಡತಕ್ಕಂಥ ವಿಧಾನ, ಆ ಇಲಾಖೆಗಳಿಗೆ ಸಂಬಂಧಪಟ್ಟ ಹಣಕಾಸನ್ನು ಸರಿಯಾದ ರೀತಿಯಲ್ಲಿ ಖರ್ಚು ಮಾಡಿದೆಯೇ, ಇಲ್ಲವೇ, ಎಂಬುದನ್ನು ಸದನವು ವಿವರವಾಗಿ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲದೇ ಇರತಕ್ಕಂಥ ಒಂದು ದುರದೃಷ್ಟಕರ ಪರಿಸ್ಥಿತಿ ಇವತ್ತು ನಿರ್ಮಾಣವಾಗಿದೆ. ಮತ್ತೆ ಆ ಇಲಾಖೆಗಳು ಸಮರ್ಪಕವಾಗಿ ತಮ್ಮ ಇಲಾಖೆಗೆ ಬಂದಂಥ ಹಣವನ್ನು ವೆಚ್ಚ ಮಾಡುತ್ತಿವೆಯೇ? ಅದು ಸದ್ವಿನಿಯೋಗವಾಗುತ್ತಿದೆಯೇ? ಇಲ್ಲವೇ? ಎಂಬುದನ್ನು ಪರಾಮರ್ಶಿಸುವುದಕ್ಕೆ ಈ ಸದನ ಬಿಟ್ಟರೆ ಬೇರಾವುದೇ ವೇದಿಕೆ ಇಲ್ಲ. ಆದರೆ, ಈ ಅವಕಾಶ ಸದನಕ್ಕೆ ಸಿಗುತ್ತಿಲ್ಲ. ಇದು ನಿಜವಾಗಿಯೂ ಈ ಸದನಕ್ಕೆ ಆಗುತ್ತಿರುವ ಒಂದು ಘೋರ ಅಪಚಾರವಾಗಿದೆ. ಏಕೆಂದರೆ, ಸಾರ್ವಜನಿಕರ ಹಣವಾದ 41,000 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಸರ್ಕಾರಕ್ಕೆ ನಾವು ಅನುಮತಿ ಕೊಡುವ ಸಂದರ್ಭದಲ್ಲಿ ವಿವರವಾಗಿ ಚರ್ಚೆ ಮಾಡಿ ಸಾರ್ವಜನಿಕರಿಗೂ ನಾವು ಜವಾಬ್ದಾರರಾಬೇಕಾಗುತ್ತದೆ. ಏಕೆಂದರೆ, ಹಣ ಸಾರ್ವಜನಿಕರದ್ದು. We are accountable to public. ಆದರೆ, ನಾವು ಇವತ್ತು ಆ acountability ಯನ್ನು ತೋರುತ್ತಿಲ್ಲ ಮತ್ತು ಯಾವ ಇಲಾಖೆಯ ಮಂತ್ರಿಗಳು ಕೂಡ ಇಲಾಖೆಗಳ ಮೇಲೆ ಚರ್ಚೆ ಮಾಡತಕ್ಕಂಥ ಸಂದರ್ಭದಲ್ಲಿ, ವಿತ್ತೀಯ ಕಲಾಪದಲ್ಲಿ ಚರ್ಚೆಯಾಗತಕ್ಕಂಥ ಸಂದರ್ಭದಲ್ಲಿ ಗಂಭೀರವಾಗಿ ಕುಳಿತು, ಸದನದಲ್ಲಿ ಯಾವ ರೀತಿ ಚರ್ಚೆಯಾಗುತ್ತಿದೆ, ಸದನದ ಸದಸ್ಯರುಗಳು

ಯಾವ ರೀತಿ ಅಭಿಪ್ರಾಯಗಳನ್ನು ಕೊಡುತ್ತಾರೆ, ಅದರಲ್ಲಿ ಏನಾದರೂ ಸರಿಯಾದ ವಿಚಾರಗಳಿವೆಯೇ? ಇಲ್ಲವೇ? ನಾವೆಲ್ಲರೂ ಒಪ್ಪತಕ್ಕಂಥಾದ್ದು ಇದೆಯೇ? ಅಥವಾ ತಿರಸ್ಕರಿಸುವುದೇನಾರೂ ಇದೆಯೇ? ಅಥವಾ ಸಲಹೆಗಳನ್ನು ತೆಗೆದುಕೊಳ್ಳುವುದೇನಾದರೂ ಇದೆಯೇ? ಇಲ್ಲವೇ ಎನ್ನುವ ಗೋಜಿಗೆ ಮಂತ್ರಿಗಳು ಹೋಗುವುದಿಲ್ಲ. ಸುಮಾರು ಮಂತ್ರಿಗಳು ಹಾಜರಾಗುವುದಿಲ್ಲ. ಹಾಜರಾದ ಮಂತ್ರಿಗಳು ಅವರದೇ ಆದ ಲೋಕದಲ್ಲಿ ವಿಹರಿಸುತ್ತಿರುತ್ತಾರೆ. ಇಲ್ಲಿ ಏನೋ ಚರ್ಚೆಯಾಗುತ್ತಿರುತ್ತದೆ, ಸದಸ್ಯರು ಏನೋ ಹೇಳುತ್ತಿರುತ್ತಾರೆ, ಇವರೇನೋ ಮಾತನಾಡಿಕೊಳ್ಳುತ್ತಿರುತ್ತಾರೆ, ಈ ಕಡೆಗೆ ಅವರ ಗಮನವಿರುವುದಿಲ್ಲ, ಇದು ಪರಿಸ್ಥಿತಿ. ಇದು ನಮ್ಮ ಬೇಜವಾಬ್ದಾರಿತನದ ಪರಮಾವಧಿ ಎಂಬುದು ನನ್ನ ಸ್ವಂತ ಅಭಿಪ್ರಾಯ. ಮಾನ್ಯ ಯಡಿಯೂರಪ್ಪನವರೆ, 41,000 ಕೋಟಿ ರೂಪಾಯಿಗಳಿಗೆ ನಾವು ನಿಮಗೆ ಅನುಮತಿ ಕೊಡಬೇಕು. ಈ ಸರ್ಕಾರಕ್ಕೆ ಖರ್ಚು ಮಾಡುವುದಕ್ಕೆ ಅರ್ಹತೆ ಇದೆಯೇ ಎಂದು ನಾನು ನಿಮ್ಮನ್ನು ಮೊದಲು ಕೇಳುತ್ತಿದ್ದೇನೆ. ಏಕೆಂದರೆ, ಬಜೆಟ್ ಅನ್ನು ನೀವು ಮಾರ್ಚಿ ತಿಂಗಳಿನಲ್ಲಿ ಮಂಡಿಸಿದ್ದೀರಿ. ಈಗ ನಾವು 7ನೇ ತಿಂಗಳಿನಲ್ಲಿದ್ದೇವೆ. ಒಂದು ವರ್ಷಕ್ಕೆ ನೀವು 41,000 ಕೋಟಿ ರೂಪಾಯಿಗಳಿಗೆ ಆಯವ್ಯಯ ಮಂಡಿಸಿದ್ದೀರಿ. ಮಂಡಿಸಿ 5 ತಿಂಗಳುಗಳಾಯಿತು. ಅಂದರೆ, ನಾವು ಈಗ 7ನೇ ತಿಂಗಳಿನಲ್ಲಿದ್ದೇವೆ. ಇದು ನೀವು ಮಾರ್ಚಿ ತಿಂಗಳಿನಲ್ಲಿ ಮಂಡಿಸಿದ ಬಜೆಟ್ ಹೌದೇ? ಅಲ್ಲವೇ? ಈ ತಿಂಗಳ 30ನೇ ತಾರೀಖು ಮುಗಿದರೆ, 5 ತಿಂಗಳು ಮುಗಿಯುತ್ತದೆ. ಹಣವನ್ನು ಪೂರ್ತಿ ಖರ್ಚು ಮಾಡುವುದಕ್ಕೆ 31ನೇ ತಾರೀಖಿನೊಳಗೆ ನಿಮಗೆ ಒಪ್ಪಿಗೆ ಕೊಡಬೇಕು. ಅದಾದ ನಂತರ, ಆಗಸ್ಟ್‌ನಿಂದ ಶುರು ಮಾಡತಕ್ಕಂಥಾದ್ದು. ಅಲ್ಲಿಗೆ 4 ತಿಂಗಳಾಯಿತು. ನಾಲ್ಕು ತಿಂಗಳ ಹಿಂದೆ ನೀವು ಬಜೆಟ್ ಮಂಡಿಸಿದ್ದೀರಿ. ಇದುವರೆಗೂ 4 ತಿಂಗಳಿನಲ್ಲಿ ಯಾವ್ಯಾವ ಇಲಾಖೆಗಳಿಗೆಂದು ನೀವು ಬಜೆಟ್‌ನಲ್ಲಿ ಹಣವನ್ನು ತೆಗೆದಿಟಿದ್ದೀರಿ. ಆ ಇಲಾಖೆಯಲ್ಲಿ ನೀವು ಖರ್ಚು ಮಾಡಿರತಕ್ಕಂಥ ಹಣವೆಷ್ಟು? ಇನ್ನು ಉಳಿದಿರುವ 8 ತಿಂಗಳೊಳಗೆ ಇಡೀ ಹಣವನ್ನು ಖರ್ಚು ಮಾಡುವುದಕ್ಕೆ ಸಾಧ್ಯವಿದೆಯೇ? ಸಾಧ್ಯವಿಲ್ಲವೆಂದು ನಾನು ಭಾರೀ ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಅದಕ್ಕೋಸ್ಕರ, ನೀವು ಹಿಂದಿನ ವರ್ಷ ಬಜೆಟ್‌ನಲ್ಲಿ ತೆಗೆದಿಟ್ಟ ಹಣ ಯಾವ ರೀತಿಯಲ್ಲೂ ಖರ್ಚಾಗಿಲ್ಲವೆಂದು ಹೇಳ ಬಯಸುತ್ತೇನೆ. Social Welfare Department ಒಂದನ್ನು ತೆಗೆದು ನೋಡಿ. ಉದಾಹರಣೆಗೆ, ಗಂಗಾ ಕಲ್ಯಾಣ ಯೋಜನೆ, ನೀವು 15 ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿರಿ. ಆದರೆ, ಖರ್ಚು ಮಾಡಿರುವುದು 12 ಕೋಟಿ ರೂಪಾಯಿಗಳು. ಅದರಲ್ಲಿ 4 ತಿಂಗಳಿನಲ್ಲಿ ಬೋರ್‌ವೆಲ್

ಕೊರೆಸಿ, ಪಂಪ್‌ಸೆಟ್ ಕೊಡಿಸಿ ಪೂರ್ಣ ಹಣ ಖರ್ಚು ಮಾಡಲು ಸಾಧ್ಯವಿಲ್ಲ. ಪಂಪ್‌ಸೆಟ್ ಇಲ್ಲ, ಪೈಪುಗಳಿಲ್ಲ. ಇದನ್ನು ನಾನು ಉದಾಹರಣೆಗೆ ಹೇಳುತ್ತಿದ್ದೇನೆ. ಮನೆಗಳ ನಿರ್ಮಾಣಕ್ಕೆ ಹಣ ಕೊಟ್ಟಿರಿ. ಕಳೆದ ವರ್ಷ ಖರ್ಚು ಮಾಡಿರುವುದೆಷ್ಟು? 70% ಮಾತ್ರ, ಉಳಿದ 30% ಖರ್ಚು ಮಾಡಲೇ ಇಲ್ಲ. ಈಗ ಮತ್ತೆ ಈ ವರ್ಷಕ್ಕೆ ನೀವು ಬೇಡಿಕೆ ಕೇಳುತ್ತಿದ್ದೀರಿ. ಕಳೆದ ವರ್ಷದ ಬಜೆಟ್‌ನಲ್ಲಿ ಏನು ಕೊಡಲಾಗಿತ್ತು, ಅದನ್ನು ನಿಮ್ಮಿಂದ ಖರ್ಚು ಮಾಡುವುದಕ್ಕಾಗಿಲ್ಲ. ಅದನ್ನು ಖರ್ಚು ಮಾಡದೇ ಈ ವರ್ಷ ಮತ್ತೆ ಅನುದಾನ ಕೇಳುತ್ತಿದ್ದೀರಿ. ನಿಮಗೆ ಅನುದಾನ ಕೊಡಬೇಕೆ? ಯಾವ ಪುರುಷಾರ್ಥಕ್ಕೆ ನಿಮಗೆ ಕೊಡಬೇಕು? ನಿಮ್ಮ ಇಲಾಖೆಗಳಿಗೆ ಕೊಟ್ಟ ಹಣವನ್ನು ಖರ್ಚು ಮಾಡುವುದಕ್ಕೆ ನಿಮಗೆ ಶಕ್ತಿ ಇಲ್ಲದಿರುವಾಗ, ಸಾಧ್ಯವಿಲ್ಲದೇ ಇರುವಾಗ ಇಲಾಖೆಗೆ ಏಕೆ ಹಣ ಕೊಡಬೇಕು? ಎಲ್ಲಾ ಇಲಾಖೆಗಳದ್ದು ಇದೇ ಪರಿಸ್ಥಿತಿಯಾಗಿದೆ. ಇದೊಂದು ಉದಾಹರಣೆಯನ್ನು ನಾನು ನಿಮಗೆ ಹೇಳಿದ್ದು. ನಿಮಗೆ ಖರ್ಚು ಮಾಡುವುದಕ್ಕಾಗಿಲ್ಲ.

ಶ್ರೀ ಕೆ. ಶ್ರೀನಿವಾಸಗೌಡ: ಒಂದು ನಿಮಿಷ. ಯೀಲ್ಡ್ ಆಗುತ್ತೀರಾ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಬೇಡ. ನಾನು ಯೀಲ್ಡ್ ಆಗುವುದು, ನಮ್ಮ ಟೈಮ್ ತೆಗೆದುಕೊಳ್ಳುವುದು. 'ಟೈಮ್ ಆಗಿದೆ. ಕುಳಿತುಕೊಳ್ಳಿ, ಕುಳಿತುಕೊಳ್ಳಿ' ಎಂದು ಅಧ್ಯಕ್ಷರು ಬೆಲ್ ಹೊಡೆಯುವುದು.

ಅಧ್ಯಕ್ಷರು: ನೀವು ಮಾತನಾಡಿ. ಅವರಿಗೆ ಯೀಲ್ಡ್ ಆಗಬೇಡಿ, ನೀವು ಯೀಲ್ಡ್ ಆದರೆ, 11.30 ಗಂಟೆಗೆ ನಿಲ್ಲಿಸಿ ಬಿಡುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಅಧ್ಯಕ್ಷರು ಒಪ್ಪಿಕೊಂಡರೆ ನಾನು ಕೂರುತ್ತೇನೆ.

ಶ್ರೀ ಕೆ. ಶ್ರೀನಿವಾಸಗೌಡ: ನನಗೆ ಒಂದು ನಿಮಿಷ ಕೊಡಿ. ನಮ್ಮ ಕಡೆ ಯಾರೂ ಇಲ್ಲ. Atleast, ನಾನು ಮಾತನಾಡುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಈ ರೀತಿ ಮಧ್ಯ ಪ್ರವೇಶ ಮಾಡಿ ಮಾತನಾಡಿದಾಗ ನನ್ನ ಸಮಯವನ್ನು ದಯವಿಟ್ಟು ಲೆಕ್ಕ ಹಾಕಬೇಡಿ.

ಶ್ರೀ ಕೆ. ಶ್ರೀನಿವಾಸಗೌಡ: ಗಂಗಾ ಕಲ್ಯಾಣ ಕಾರ್ಯಕ್ರಮಕ್ಕೆ 15 ಕೋಟಿ ಇಟ್ಟಿದ್ದಾರೆ. ಆದರೆ ಇಲ್ಲಿ planning ನಲ್ಲೇ mistake ಆಗಿಹೋಗಿದೆ. ಫಲಾನುಭವಿಗಳಿಗೆ 1 ಲಕ್ಷ ಏನು ಕೊಡುತ್ತೀರಿ ಕೇವಲ ಬೋರ್ ಮಾಡುವುದಕ್ಕೇ ಒಂದು ಲಕ್ಷದ ಮೇಲೆ ಹಣ ಖರ್ಚಾಗುತ್ತದೆ ನಮ್ಮ ಜಿಲ್ಲೆಯಲ್ಲಿ. ಈ ರೀತಿ ಇವರ planning ತಪ್ಪಾಗಿರುವುದರಿಂದ ಕೂಡ ಆ ಹಣ ಖರ್ಚಾಗುತ್ತಿಲ್ಲ ಎನ್ನುವುದನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಈ ಆಯವ್ಯಯದಲ್ಲಿ ಯಾವ್ಯಾವ ಇಲಾಖೆಗೆ ಎಷ್ಟೆಷ್ಟು ಹಣವನ್ನು ತೆಗೆದು ಇಟ್ಟಿರುತ್ತೀರೋ ಆ ಹಣವನ್ನು ಖರ್ಚು ಮಾಡಿ ಅಭಿವೃದ್ಧಿ ಮಾಡುವುದಕ್ಕೆ ಸಾಧ್ಯವಿಲ್ಲದ ಸಂದರ್ಭ ನಿರ್ಮಾಣ ಮಾಡಿರುವಾಗ ನಿಮಗೆ ಮತ್ತೆ ಏಕೆ ಹಣ ಕೊಡಬೇಕು ಎನ್ನತಕ್ಕದ್ದು ನನ್ನ ಮೊದಲನೆಯ ಪ್ರಶ್ನೆ? ಅದಕ್ಕೆ ಸರ್ಕಾರ ಉತ್ತರ ಕೊಡಬೇಕು.

ಎರಡನೆಯದಾಗಿ, ಈಗಾಗಲೇ ಬಜೆಟ್ ಮಂಡನೆ ಮಾಡಿ ನಾಲ್ಕು ತಿಂಗಳು ಕಳೆದು ಹೋಗಿದೆ. ನೀವು ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ? ಇನ್ನು 8 ತಿಂಗಳಿನಲ್ಲಿ ಉಳಿದಿರುವ ಹಣವನ್ನು ಖರ್ಚು ಮಾಡುತ್ತೀರ? ನಾನು ಒಂದು ಉದಾಹರಣೆಯನ್ನು ಹೇಳುತ್ತೇನೆ, ಶಾಸಕರ ಕ್ಷೇತ್ರಾಭಿವೃದ್ಧಿ ನಿಧಿಗೆ ಎಂದು ಒಂದು ಕೋಟಿ ಹಣ ಕೊಟ್ಟಿದ್ದೀರಿ. ಆದರೆ ನೀವು ಈಗ ಬಿಡುಗಡೆ ಮಾಡಿರುವುದು ಕೇವಲ 25 ಲಕ್ಷ. ನಾಲ್ಕು ತಿಂಗಳಿಗೆ 25 ಲಕ್ಷ ರೂಪಾಯಿಯನ್ನು ಬಿಡುಗಡೆ ಮಾಡಿದ್ದೀರಿ.

ಶ್ರೀ ಬಿ. ಎಸ್. ಯಡಿಯೂರಪ್ಪ (ಉಪಮುಖ್ಯ ಮಂತ್ರಿಗಳು ಹಾಗೂ ಹಣಕಾಸು ಸಚಿವರು): ದಯಮಾಡಿ ನಾನು ಮಧ್ಯದಲ್ಲಿ ಹೇಳುವುದಿಲ್ಲ. ನೀವು ಪೂರ್ಣ ಕೊಡಲು ಮಂಜೂರಾತಿಯನ್ನೇ ಕೊಟ್ಟಿಲ್ಲವಲ್ಲಾ? ಈಗ ನನಗೆ ಮೂರನೇ ಒಂದು ಭಾಗ ಗ್ರಾಂಟ್ ಮಾತ್ರ ಕೊಡಬಹುದು. ನಾಲ್ಕು ತಿಂಗಳಿಗೆ ಒಂದು ಕೋಟಿಯಲ್ಲಿ 25 ಲಕ್ಷವನ್ನು ಬಿಡುಗಡೆ ಮಾಡಿದ್ದೇನೆ. ಇದನ್ನು ನೀವು ಒಪ್ಪುತ್ತೀರ ಎಂದು ಭಾವಿಸುತ್ತೇನೆ. ಅದಕ್ಕೆ ನೀವು ನಮಗೆ ಅಭಿನಂದನೆ ಸಲ್ಲಿಸಬೇಕು. 50 ಕೋಟಿ ಹಣ ready ಇದೆ. ಆದರೆ ಕೊಡಲು ಬರುವುದಿಲ್ಲ. ಈ ಬಜೆಟ್ ಪಾಸ್ ಆದ 24 ಗಂಟೆಯೊಳಗೆ ಮತ್ತೆ 25 ಲಕ್ಷ ಕೊಡುತ್ತೇನೆ. ಆದ್ದರಿಂದ ಇದರ ಬಗ್ಗೆ ನೀವೇ ಗೈಡ್ ಮಾಡಿ.

ಶ್ರೀ ಕೆ. ಶ್ರೀನಿವಾಸಗೌಡ: ನಾವು ಲೇಖಾನುದಾನವನ್ನೇ ಕೊಟ್ಟಿದ್ದೆವಲ್ಲ?

ಶ್ರೀ ಬಿ.ಎಸ್. ಯಡಿಯೂರಪ್ಪ: ಲೇಖಾನುದಾನದಲ್ಲಿ ಮೂರನೇ ಒಂದು ಭಾಗ ಗ್ರಾಂಟ್ ಮಾತ್ರ ಅನುಮತಿ ಕೊಟ್ಟಿರುವುದಲ್ಲವೇ? You are the Senior leader.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಯಡಿಯೂರಪ್ಪನವರು ಹೇಳುವುದು ಸರಿ ಇದೆ. adhoc arrangement ನಿಂದ ultimately ಏನಾಗುತ್ತದೆ ಹೇಳಿ? ಲೇಖಾನುದಾನಗಳನ್ನು ತೆಗೆದುಕೊಳ್ಳುವುದು ಸದನಕ್ಕೆ ಶೋಭೆ ತರತಕ್ಕದ್ದಲ್ಲ. adhoc arrangement ನಿಂದಾಗಿಯೇ ಈ ರೀತಿ ಪರಿಸ್ಥಿತಿ ನಿರ್ಮಾಣ ಆಗತಕ್ಕದ್ದು. ಇಂಥ ಪರಿಸ್ಥಿತಿಯನ್ನು ನಿರ್ಮಾಣ ಮಾಡತಕ್ಕವರು ಯಾರು? ಏಕೆ ಪೂರ್ಣ ಪ್ರಮಾಣದಲ್ಲಿ ಬಜೆಟ್ ಮಂಡಿಸಿ ಚರ್ಚೆ ಮಾಡಿ ಒಪ್ಪಿಗೆ ಪಡೆಯಲು ಆಗುತ್ತಿಲ್ಲ? ಹಲವಾರು ರಾಜಕೀಯ ಕಾರಣಗಳಿಂದ ಪೂರ್ಣ ಪ್ರಮಾಣದ

ಬಜೆಟ್ ಮಂಡಿಸಿದಾಗ ಪೂರ್ಣ ಪ್ರಮಾಣದ ಚರ್ಚೆ ಮಾಡಲು ಅವಕಾಶ ಇಲ್ಲದ ರೀತಿಯಲ್ಲಿ ಈ ಸದನವನ್ನು ನಡೆಸಿಕೊಂಡು ಹೋಗುತ್ತಿರುವ ಕಾರಣಕ್ಕೋಸ್ಕರ ಈ ಅವ್ಯವಸ್ಥೆ ಉಂಟಾಗಿದೆ. ನಾವೇ 60 ದಿವಸ ಕಡ್ಡಾಯವಾಗಿ ಸದನ ನಡೆಸಬೇಕೆಂದು ಈ ಸದನದಲ್ಲೇ ಕಾನೂನು ಪಾಸ್ ಮಾಡಿದ್ದೇವೆ. ಅದನ್ನು ನಾವೇ ಪಾಲಿಸುತ್ತಿಲ್ಲ. ಅದನ್ನು ಪಾಲಿಸಲು ಮೊದಲು ಜವಾಬ್ದಾರಿ ತೆಗೆದುಕೊಳ್ಳಬೇಕಾಗಿದ್ದು ಸರ್ಕಾರ. ಸರ್ಕಾರ ಪ್ರಜಾಸತ್ತಾತ್ಮಕವಾಗಿ ನಡೆಯಬೇಕಾಗಿದ್ದರೆ ಕಾನೂನು ಪ್ರಕಾರ 60 ದಿನ ಸದನ ನಡೆಯುವ ವಾತಾವರಣ ನಿರ್ಮಾಣ ಮಾಡಬೇಕಾದದ್ದು ಸರ್ಕಾರದ ಕರ್ತವ್ಯ. ಆದರೆ ಸರ್ಕಾರಕ್ಕೆ ಸದನವನ್ನು 60 ದಿವಸಗಳ ಕಾಲ ನಡೆಸುವ ಇಚ್ಚೆ ಇಲ್ಲ. ಸದನ ನಡೆಯುತ್ತಿರುವ ಸಂದರ್ಭದಲ್ಲಿ ಜವಾಬ್ದಾರಿ ಇರತಕ್ಕ ಮಂತ್ರಿಗಳು, ಮುಖ್ಯ ಮಂತ್ರಿಗಳು ಸದನದಲ್ಲಿ ಇರುವುದೇ ಇಲ್ಲ. ನೀವು ದಾಖಲೆ ತೆಗೆಸಿ ನೋಡಬೇಕು. ನಮ್ಮ ಮುಖ್ಯಮಂತ್ರಿಗಳು ಸದನ ನಡೆಯತಕ್ಕ ಸಂದರ್ಭದಲ್ಲಿ ಎಷ್ಟು ದಿವಸ ಸದನಕ್ಕೆ ಹಾಜರಾಗಿದ್ದಾರೆ, ಎಷ್ಟು ಸಮಯ ಹಾಜರಿದ್ದಾರೆ? ಅವರು ಈ ಸಭೆಯ ನಾಯಕರು. ನಾನು ವೈಯಕ್ತಿಕವಾಗಿ ಟೀಕೆ ಮಾಡುತ್ತಿಲ್ಲ. ಅವರು ಸಭಾ ನಾಯಕರು. ಭಾರತ ದೇಶದಲ್ಲಿ ಈ ಸದನ ಮತ್ತು Parliamentary ವ್ಯವಸ್ಥೆಯಲ್ಲಿ ಒಂದು ಸತ್ಸಂಪ್ರದಾಯವಿದೆ. ಲೋಕಸಭೆ ನಡೆಯುವಾಗ, ವಿಧಾನಸಭೆಯ ಅಧಿವೇಶನ ಇರುವಾಗ ಮಂತ್ರಿಗಳಾಗಲೀ ಅಥವಾ ಮುಖ್ಯಮಂತ್ರಿಗಳಾಗಲೀ ಹೊರಗಿನ ಯಾವುದೇ ಕಾರ್ಯಕ್ರಮವನ್ನು ಹಾಕಿಕೊಳ್ಳಬಾರದು. ಆ ರೀತಿ ಕಾರ್ಯಕ್ರಮವನ್ನು ಹಾಕಿಕೊಳ್ಳಬಾರದು ಎಂದು ಏಕೆ ನಿಯಮ ಇಟ್ಟಿದ್ದಾರೆಂದರೆ, ಮಂತ್ರಿಗಳು, ಮುಖ್ಯ ಮಂತ್ರಿಗಳು ಸದನ ನಡೆಯುತ್ತಿರುವ ಸಂದರ್ಭದಲ್ಲಿ ಹೊರಗಡೆ ಓಡಾಡಿದರೆ ಸಾರ್ವಜನಿಕರು ಹಲವಾರು ಪ್ರಶ್ನೆಗಳನ್ನು ಕೇಳುತ್ತಾರೆ, ಬೇಡಿಕೆಗಳನ್ನು ಇಡುತ್ತಾರೆ, ಅವರು ಆಗ ಅಲ್ಲಿ ಆಶ್ವಾಸನೆ ಕೊಡಬೇಕಾಗುತ್ತದೆ. ಅಲ್ಲಿ ಆಶ್ವಾಸನೆ ಕೊಟ್ಟರೆ ಸದನಕ್ಕೆ ಚ್ಯುತಿ ಬರುತ್ತದೆ. ಸದನ ನಡೆಯುವಾಗ ಹೊರಗಡೆ ಮಂತ್ರಿಗಳು ಸರ್ಕಾರದ ಪಾಲಿಸಿಗೆ ಸಂಬಂಧಿಸಿದಂತೆ ಮುಖ್ಯವಾದ ವಿಚಾರಕ್ಕೆ ಸಂಬಂಧಿಸಿದಂತೆ ಹೇಳಿಕೆ ಕೊಟ್ಟರೆ ಸದನಕ್ಕೆ ಚ್ಯುತಿ ಬರುತ್ತದೆ ಎಂಬ ಕಾರಣಕೋಸ್ಕರ ಸದನ ನಡೆಯತಕ್ಕ ಸಂದರ್ಭದಲ್ಲಿ ಪ್ರಧಾನ ಮಂತ್ರಿಗಳಾಗಲೀ ಮುಖ್ಯ ಮಂತ್ರಿಗಳಾಗಲೀ ಮಂತ್ರಿಗಳಾಗಲೀ ಹೊರಗಿನ ಬೇರೆ ಯಾವುದೇ ಸಾರ್ವಜನಿಕ ಕಾರ್ಯಕ್ರಮವನ್ನು ಹಾಕಿಕೊಳ್ಳಬಾರದು ಎಂಬ ನಿಯಮ ಭಾರತ Parliamentary ವ್ಯವಸ್ಥೆಯಲ್ಲಿದೆ. ಅದನ್ನು ಗಾಳಿಗೆ ತೂರಿಬಿಟ್ಟಿರಿ. ಇಲ್ಲಿ ಸದನ ನಡೆಯುತ್ತಿರುತ್ತದೆ. ಮುಖ್ಯ ಮಂತ್ರಿಗಳ ಕಾರ್ಯಕ್ರಮದ ಪಟ್ಟಿ ಬರುತ್ತದೆ. 11-00, 12-00, 3-00, 5-00 ಗಂಟೆಗೆ ಒಂದರಂತೆ ಪಟ್ಟಿ ಬರುತ್ತದೆ.

ಮಂತ್ರಿಗಳಲ್ಲಿ ಅರ್ಧ ಜನರು ಕಾರ್ಯಕ್ರಮ ಹಾಕಿಕೊಂಡು ಬೇರೆ ಕಡೆಗೆ ಹೋಗುತ್ತಿರುತ್ತಾರೆ. ಅಂದರೆ ನೀವು ಈ ಸದನಕ್ಕೆ ಕೊಡುತ್ತಿರುವ ಗೌರವವೇನು? ಇದರ ಪರಿಣಾಮ ಇಡೀ ಆಡಳಿತ ಯಂತ್ರದ ಮೇಲಾಗಿದೆ. ಹಣಕಾಸು ವ್ಯವಸ್ಥೆಯ ನಿರ್ವಾಹಣೆಯ ಮೇಲಾಗಿದೆ. ಹಣಕಾಸು ವ್ಯವಸ್ಥೆಯನ್ನು adhoc arrangement ತರಬೇಕಾದ ಪರಿಸ್ಥಿತಿ ನಿರ್ಮಾಣ ಏಕೆ ಆಗಿದೆ ಎಂದರೆ ಬಜೆಟ್‌ನ್ನು ಫೆಬ್ರವರಿ ತಿಂಗಳಿನಲ್ಲಿ ಮಂಡಿಸಬೇಕು, ಮಾರ್ಚ್ ಕೊನೆಯವರೆಗೂ ಅದರ ಮೇಲೆ ಚರ್ಚೆ ನಡೆಯಬೇಕು. ಮಾರ್ಚ್ 31ರ ಒಳಗೆ ಅದು ಅಂಗೀಕಾರ ಆಗಬೇಕು. ಆಗ adhoc arrangement ಇರುವುದಿಲ್ಲ. ಆದರೆ ಇವತ್ತು ಏನಾಗಿದೆ, ಮಾರ್ಚ್ 22,23 ಇಲ್ಲವೇ 25 ರಂದು ಬಜೆಟ್ ಮಂಡಿಸುವುದು, ಮಾರ್ಚ್ 31ಕ್ಕೆ ಬಜೆಟ್‌ಗೆ ಒಪ್ಪಿಗೆ ಕೊಡದಿದ್ದರೆ ಸಂಬಳ ಕೊಡಲು ಆಗುವುದಿಲ್ಲ, ಒಂದು ಪೈಸೆ ಖರ್ಚು ಮಾಡಲು ಹಣ ಇರುವುದಿಲ್ಲವೆಂದು ನಮ್ಮ ಕುತ್ತಿಗೆ ಮೇಲೆ ಕುಳಿತು ಲೇಖಾನುದಾನ ತೆಗೆದುಕೊಂಡು ಹೋಗೋದು. ಈಗ ಲೇಖಾನುದಾನ ತೆಗೆದುಕೊಂಡು ಹೋಗಿದ್ದೇವೆ, ನಾವು ಪೂರ್ತಿ ಹಣ ಖರ್ಚು ಮಾಡಲು ಆಗುವುದಿಲ್ಲ. ಮೂರನೇ ಒಂದು ಭಾಗ ಹಣ ಮಾತ್ರ ಖರ್ಚು ಮಾಡಲು ಮಾತ್ರ ಸಾಧ್ಯವಿದೆಯೆಂದು ಇಲ್ಲಿ ಬಂದು ಕೈ ಎತ್ತಿಬಿಡುವುದು. ಇದಕ್ಕೆ ಯಾರು ಜವಾಬ್ದಾರರು? 4 ತಿಂಗಳು ಈ ರಾಜ್ಯದ ಅಭಿವೃದ್ಧಿಯ ವೇಗ ಕುಂಟಿತವಾದರೆ ಸಾರ್ವಜನಿಕರಿಗೆ ಉತ್ತರ ಕೊಡಬೇಕಾಗಿರತಕ್ಕದ್ದು ಸದನ. ಸರ್ಕಾರ ಅಲ್ಲ. ನಾಳೆ ಜನರು ಈ ಸದನದಲ್ಲಿರುವ ಜನರು ಎಷ್ಟು ಬೇಜವಾಬ್ದಾರಿಯಾಗಿದ್ದಾರೆಂದು ಕೇಳುತ್ತಾರೆ. ಅದಕ್ಕೆ ಯಾರು ಉತ್ತರ ಕೊಡಬೇಕು? ಸರ್ಕಾರದ ಬೇಜವಾಬ್ದಾರಿಗೆ ಇಡೀ ಸದನ ಜವಾಬ್ದಾರಿಯಾಗಬೇಕೆ? ಇವತ್ತು ಹಣಕಾಸು ಸಚಿವರು 41 ಸಾವಿರ ಕೋಟಿಗೆ ಅನುಮತಿ ಕೇಳಿದ್ದಾರೆ. ಈ ಸರ್ಕಾರಕ್ಕೆ 41 ಸಾವಿರ ಕೋಟಿ ರೂಪಾಯಿ ಅನುದಾನ ಪಡೆಯಲು ಅರ್ಹತೆ ಇಲ್ಲದಿರುವ ಸರ್ಕಾರ ಎಂದು ಸ್ಪಷ್ಟವಾಗಿ ಹೇಳುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ: ಹೋದ ವರ್ಷ ಬಜೆಟ್ ಮಂಡನೆ ಮಾಡಿದ್ದೇನೆ. ಹೋದ ವರ್ಷದ ಅಂಕಿ ಅಂಶವಿದೆ. ನಾನು ಹೋದ ಸಲ ಎಷ್ಟು ಇಟ್ಟಿದ್ದೆ, ಏನು ಖರ್ಚು ಮಾಡಿದ್ದೇನೆ ನೋಡಿ ಹೇಳಿ. ಅಲ್ಲಿ ಖರ್ಚಾಗದಿದ್ದರೆ ನನಗೆ ಯೋಗ್ಯತೆ ಇಲ್ಲ ಎಂದು ಹೇಳಿ. ನಾನು ತಲೆಬಾಗುತ್ತೇನೆ. ಹೋದ ವರ್ಷದ್ದು ಒಂದೆರಡು ಹೇಳಿದಿರಿ. ಆ ರೀತಿ ಹೇಳಿ. ಒಟ್ಟು ನಾವು ತೆಗೆದು ಇಟ್ಟ ಹಣ ಎಷ್ಟು, ಖರ್ಚಾದ ಹಣ ಎಷ್ಟು, ಕಳೆದ 6–7 ವರ್ಷದಲ್ಲಿ ಏನಾಗಿದೆ ಎಂಬ ಬಗ್ಗೆ ಹೇಳಿ, ನಾನೂ ಉತ್ತರ ಕೊಡಬೇಕಾದರೆ ಕೊಡುತ್ತೇನೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ: ನಾನು ಹೇಳುತ್ತಿರುವುದು ಸರ್ಕಾರ. ಅದು ಯಡಿಯೂರಪ್ಪನವರ, ಕುಮಾರಸ್ವಾಮಿಯವರ ಸರ್ಕಾರ ಎಂದು ಹೇಳುತ್ತಿಲ್ಲ. ಹೋದ ವರ್ಷದಿಂದ ಈ ರೀತಿ ಆಗಿದೆ. ಮುಂದಿನ ವರ್ಷವೂ ಇದೇ ರೀತಿ ಮುಂದುವರೆಯುವ ಲಕ್ಷಣಗಳು ಇದೆ. ಏಕೆಂದರೆ ಈಗಾಗಲೇ 4 ತಿಂಗಳು ಕಳೆದುಹೋಗಿದೆ. ಬಾಕಿ ಇರತಕ್ಕದ್ದು 8 ತಿಂಗಳು ಮಾತ್ರ. ಇದಕ್ಕೆ ಯಡಿಯೂರಪ್ಪನವರು ಒಬ್ಬರೇ ಕಾರಣ ಎಂದು ಹೇಳುತ್ತಿಲ್ಲ. ಇವತ್ತು ನಾನು ಸರ್ಕಾರದ ಬಗ್ಗೆ ಹೇಳುತ್ತಿರತಕ್ಕದ್ದು. ಸರ್ಕಾರಕ್ಕೆ ಕೊಡತಕ್ಕ ಅರ್ಹತೆ ಇದೆಯೇ ಎಂದು ಹೇಳುತ್ತಿರುವುದು. ನಿಮ್ಮ ಸರ್ಕಾರ ಆಡಳಿತ ನಿರ್ವಾಹಣೆ ಮಾಡುತ್ತಿರುವ ವಿಧಾನ, ನಿಮ್ಮ ಆಡಳಿತದಲ್ಲಿ ನಿಮಗೆ ಹಿಡಿತ ಇಲ್ಲ. ನಿಮ್ಮ ಅಧಿಕಾರಿಗಳು ನಿಮ್ಮ ಹಿಡಿತದಲ್ಲಿ ಕೆಲಸ ಮಾಡುತ್ತಿದ್ದಾರೆಯೇ? 2006ನೇ ಇಸವಿ 6ನೇ ತಿಂಗಳಿನಲ್ಲಿ ಮಾನ್ಯ ಉದಾಸಿಯವರು ಆರ್.ಡಿ.ಪಿ.ಆರ್. ಸಚಿವರಾಗಿದ್ದಾಗ 12ನೇ ಹಣಕಾಸು ಯೋಜನೆಯಲ್ಲಿ ಯಾವುದೋ ಒಂದು ರಸ್ತೆಗೆ ಎಂದು ಕೇಳಿದಾಗ ನನಗೆ 20 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದ್ದರು. ನನ್ನ ಹತ್ತಿರ ಅದಕ್ಕೆ ಸಂಬಂಧಿಸಿದಂತೆ ನಿಮ್ಮ ಸರ್ಕಾರದ ಆದೇಶ ಕೂಡ ಇದೆ. ಅಂದರೆ ಇವತ್ತಿಗೆ 13 ತಿಂಗಳುಗಳಾಗಿದೆ ಇನ್ನೂ ಹಣ ಬಿಡುಗಡೆ ಮಾಡಿಲ್ಲ. For 13 months, your Government, your department is unable to release ₹ 20 lakhs which the Hon'ble RDPR Minister has sanctioned. Is this the Government? Is this how the Government should function? ಇಲಾಖೆ ಕೆಲಸ ಮಾಡುತ್ತಿರುವ ವಿಧಾನವೇ ಇದು? ಈ ಘನಕಾರ್ಯಕ್ಕೆ ನಿಮಗೆ ಅನುಮತಿ ಕೊಡಬೇಕೇ? ಲೇಖಾನುದಾನ ಖರ್ಚು ಮಾಡಲು ಅನುಮತಿ ಕೊಡಬೇಕೇ? 20 ಲಕ್ಷ ರೂಪಾಯಿ ಬಿಡುಗಡೆ ಮಾಡಲು ನಿಮ್ಮ ಹಣಕಾಸು ಇಲಾಖೆಗೆ ಸಾಧ್ಯವಿಲ್ಲವೆಂದರೆ 41 ಸಾವಿರ ಕೋಟಿ ರೂಪಾಯಿಗಳನ್ನು ಕೊಡಬೇಕೇ? ನಿಮಗೆ ನಾನು ಇನ್ನೊಂದು ಉದಾಹರಣೆ ಕೊಡಬಯಸುತ್ತೇನೆ. ಮಾನ್ಯ ಹಣಕಾಸಿನ ಮಂತ್ರಿಗಳಿಗೆ ಎರಡನೇ ತಿಂಗಳಿನಲ್ಲಿ ನಾನೊಂದು ಪತ್ರ ಕೊಟ್ಟಿದ್ದೆ. ಬಾಗೇಪಲ್ಲಿ ತಾಲ್ಲೂಕು ಅತಿ ಹಿಂದುಳಿದಂತಹ ತಾಲ್ಲೂಕು ಎಂದು ನಂಜುಂಡಪ್ಪನವರ ವರದಿ identify ಮಾಡಿದೆ. ದಿನ ಬೆಳಗಾದರೆ ಡಾ: ನಂಜುಂಡಪ್ಪನವರ ವರದಿಯ ಬಗ್ಗೆ ನೀವು ಭಜನೆ ಮಾಡುತ್ತೀರಿ. ಹಿಂದುಳಿದಂತಹ ತಾಲ್ಲೂಕುಗಳನ್ನು ಅಭಿವೃದ್ಧಿಪಡಿಸಬೇಕಾದರೆ ನಂಜುಂಡಪ್ಪನವರ ವರದಿಯನ್ನು ಆಧಾರವಾಗಿಟ್ಟುಕೊಳ್ಳುತ್ತೇವೆ ಎಂದು ನೀವು ಹೇಳುತ್ತೀರಿ. ನಾನು ಹಣಕಾಸಿನ ಮಂತ್ರಿಗಳಿಗೆ ಪತ್ರವೊಂದನ್ನು ಕೊಟ್ಟೆ. ಬರಡು ಪ್ರದೇಶವಾದ ಅಲ್ಲಿ Eco Parkವೊಂದನ್ನು develop ಮಾಡಬೇಕಾಗಿದೆ, ಅದಕ್ಕಾಗಿ

Horticulture Department ನವರು 1 ಕೋಟಿ 26 ಲಕ್ಷ ₹ ಗಳ estimate ಮಾಡಿದ್ದಾರೆ. ಬೇರೆ ಬೇರೆ ಕಡೆಯಿಂದ ಹಣ ತಂದು ಹಾಕಿ ಅರ್ಧ ಕೆಲಸ ಮುಗಿಸಿದ್ದೇನೆ, ಇನ್ನೊಂದು ಅರ್ಧ ಕೆಲಸ ಬಾಕಿ ಇದೆ, ಅದಕ್ಕಾಗಿ ಹಣ ಬಿಡುಗಡೆ ಮಾಡಿ ಎಂದು ನಾನು ಪತ್ರದಲ್ಲಿ ಕೋರಿದ್ದೆ. ಮಾನ್ಯ ಶ್ರೀನಿವಾಸಗೌಡರು ಮಂತ್ರಿಗಳಾಗಿದ್ದಾಗ ಅದಕ್ಕೆ ಹಣ ಕೊಟ್ಟಿದ್ದರು. ಅವರೇ ಅಲ್ಲಿ ಬಂದು ಅದನ್ನು inaugurate ಮಾಡಿದ್ದರು. 80 ಲಕ್ಷ ₹ಗಳ ಹಣ ಕೊಡಿ ಎಂದು ನಾನು ಫೆಬ್ರವರಿ ತಿಂಗಳಿನಲ್ಲಿ ಮಾನ್ಯ ಹಣಕಾಸಿನ ಸಚಿವರಿಗೆ ಪತ್ರ ಬರೆದೆ. ಇದರ ಬಗ್ಗೆ ಜರೂರು ಕ್ರಮ ತೆಗೆದುಕೊಳ್ಳಿ ಎಂದು ನನ್ನ ಹಣಕಾಸಿನ ಸಚಿವರಿಗೆ ಪತ್ರ ಬರೆದೆ. ಇದರ ಬಗ್ಗೆ ಜರೂರು ಕ್ರಮ ತೆಗೆದುಕೊಳ್ಳಿ ಎಂದು ನನ್ನ ಪತ್ರದ ಮೇಲೆ ಮಾನ್ಯ ಯಡಿಯೂರಪ್ಪನವರು ಬರೆದರು. Till this date, this Government is unable to take a decision, whether to give or not. ಈ ಇಲಾಖೆಗೆ ಹಣ ಕೊಡಬೇಕೇ? ಅದೇ ರೀತಿಯಾಗಿ ನಿಮ್ಮ ಶಿಕಾರಿಪುರಕ್ಕೆ ಕಳೆದ ನಾಲ್ಕು ತಿಂಗಳಿನಲ್ಲಿ ಎಷ್ಟು ಹಣ ಬಿಡುಗಡೆ ಮಾಡಿದ್ದೀರಿ ಎಂಬುದನ್ನು ನೀವು ಹೇಳಿ. ರಾಮನಗರಕ್ಕೆ ಎಷ್ಟು ಬಿಡುಗಡೆ ಮಾಡಿದ್ದೀರಿ? ಹೊಳೆನರಸೀಪುರಕ್ಕೆ ಎಷ್ಟು ಬಿಡುಗಡೆ ಮಾಡಿದ್ದೀರಿ? ಎಂಬುದನ್ನು ಹೇಳಿ. ಹಿಂದುಳಿದ ತಾಲ್ಲೂಕುಗಳನ್ನು ಅಭಿವೃದ್ಧಿಪಡಿಸುತ್ತೇವೆ ಎಂದು ಹೇಳತಕ್ಕಂಥ ನೀವು, ಅಲ್ಲಿ ಪಾರ್ಕ್‌ವೊಂದನ್ನು develop ಮಾಡಲಿಕ್ಕೆ ಹಣ ಕೊಡಿ ಎಂದರೆ, ಆ ಬಗ್ಗೆ ನಾಲ್ಕು ತಿಂಗಳಿನಿಂದ ತೀರ್ಮಾನ ತೆಗೆದುಕೊಳ್ಳಲಿಕ್ಕೆ ಸಾಧ್ಯವಾಗಿಲ್ಲ. RDPRನವರಿಗೆ ಬರೆದರೆ Finance Departmentನವರಿಗೆ ಬರೆಯುವುದು, Finance Departmentನವರಿಗೆ ಬರೆದರೆ RDPRಗೆ ಬರೆಯುವುದು ನಡೆಯುತ್ತಿದೆ. ಇದು ನಿಮ್ಮ ಇಲಾಖೆ ನಿರ್ವಹಣೆ ಮಾಡುತ್ತಿರುವ ಕೆಲಸವಾಗಿದೆ. For this we have to give a grant? ಇದಕ್ಕೆ ನಿಮಗೆ ಹಣ ಕೊಡಬೇಕೇ? ಇದೊಂದು ಉದಾಹರಣೆಯನ್ನು ನಾನು ನಿಮಗೆ ಹೇಳಿದೆ. ನನ್ನ ತಾಲ್ಲೂಕಿಗೆ ಹಣ ಕೊಡಲಿಲ್ಲವೆಂಬ ಉದ್ದೇಶದಿಂದ ಇದನ್ನು ನಾನು ಹೇಳುತ್ತಿಲ್ಲ. ಈ ಅವಧಿಯಲ್ಲಿ ನಿಮ್ಮ ತಾಲ್ಲೂಕುಗಳಿಗೆ ನೀವು ಎಷ್ಟು ಹಣವನ್ನು ಕೊಟ್ಟಿದ್ದೀರಿ ಎಂಬುದನ್ನು ನೀವು ಈಗ ಹೇಳಿ ನೋಡೋಣ. ಶಿಕಾರಿಪುರಕ್ಕೆ ಈ ಅವಧಿಯಲ್ಲಿ ಎಷ್ಟು ಹಣ ಬಿಡುಗಡೆ ಮಾಡಿಸಿದ್ದೀರಿ? ರಾಮನಗರಕ್ಕೆ ಎಷ್ಟು ಮಾಡಿಸಿದ್ದೀರಿ? ಹಾಸನ districtಗೆ ಎಷ್ಟು ಮಾಡಿಸಿದ್ದೀರಿ? ಮಂತ್ರಿಗಳ constituency ಗಳಿಗೆ ಎಷ್ಟು ಮಾಡಿಸಿದ್ದೀರಿ ಎಂಬುದರ ಲೆಕ್ಕವನ್ನು ನೀವು ಈಗ ಹೇಳಬೇಕು. ಅದೇ ರೀತಿಯಲ್ಲಿ ಮಾನ್ಯ ಅಧ್ಯಕ್ಷರೆ, ಮಾನ್ಯ ಈಶ್ವರಪ್ಪನವರಿಗೆ ನಾನೊಂದು ಪತ್ರ ಕೊಟ್ಟಿದ್ದೆ. ನಮ್ಮಲ್ಲಿ ಗುಡಿಬಂಡೆ ಮತ್ತು ಬಾಗೇಪಲ್ಲಿ

ತಾಲ್ಲೂಕಿಗೆ ಕುಡಿಯುವ ನೀರು ಒದಗಿಸುವ ಸಂಬಂಧ ಚಿತ್ರಾವತಿಗೆ ಅಣೆಕಟ್ಟೊಂದನ್ನು ಕಟ್ಟಲಾಗಿದೆ. ಅದರ ನಿರ್ಮಾಣವಾಗಿ ಅಲ್ಲಿಂದ ನೀರು ಸರಬರಾಜು ಆಗುತ್ತಿದೆ. ಆದರೆ ನಿರ್ಮಾಣದ ಸಂದರ್ಭದಲ್ಲಿ contractors ಗಳು ಇಡೀ debris ಎಲ್ಲವನ್ನೂ ತೆಗೆದುಕೊಂಡು ಹೋಗಿ ಅದರಲ್ಲಿ ತುಂಬಿಟ್ಟಿದ್ದಾರೆ, ಅದನ್ನು ತೆಗೆಯಬೇಕು. ಅದಕ್ಕೆ 5 ಕೋಟಿ ₹ ಗಳು ಖರ್ಚಾಗುತ್ತದೆ, ಹಣ ಕೊಡಿ ಎಂದು ನಾನು ಲೆಟರ್ ಕೊಟ್ಟು ನಾಲ್ಕು ತಿಂಗಳಾಯಿತು. ಇವತ್ತಿನವರೆಗೂ ಅದರ ಬಗ್ಗೆ ಏನನ್ನೂ ಹೇಳಲಿಲ್ಲ. ಅದರ ಬಗ್ಗೆ ಯಾವುದೇ ತೀರ್ಮಾನ ತೆಗೆದುಕೊಂಡಿಲ್ಲ. ನಾನು 2–3 ಸಲ ಫೋನ್ ಮಾಡಿ ಸಂಬಂಧಪಟ್ಟ ಅಧಿಕಾರಿಗಳಿಗೆ ಈ ಬಗ್ಗೆ ಕೇಳಿದರೆ, ಅವರು 'ಸಾರ್, ಅಲ್ಲಿಗೆ Chief Engineer ಅನ್ನು post ಮಾಡಿದ್ದೇವೆ, ಅವರು ಇನ್ನೂ charge ತೆಗೆದುಕೊಂಡಿಲ್ಲ, ಅವರು charge ತೆಗೆದುಕೊಂಡ ಮೇಲೆ ಅವರು ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಾರೆ' ಎಂದು ಉತ್ತರ ಕೊಡುತ್ತಾರೆ. ನಾನು ಪತ್ರ ಬರೆದು ಐದು ತಿಂಗಳಾಯಿತು. ಈ ರೀತಿಯಲ್ಲಿ ಕೆಲಸ ನಿರ್ವಹಣೆ ಮಾಡತಕ್ಕಂಥ ಇಲಾಖೆಗಳಿಗೆ ಹಣ ಬಿಡುಗಡೆ ಮಾಡಬೇಕೇ? ಏಕೆ ಹಣ ಬಿಡುಗಡೆ ಮಾಡಬೇಕು ಎಂಬುದನ್ನು ಇವರು ಹೇಳಬೇಕು. ಇವತ್ತು ಬಜೆಟ್ ಅನ್ನು ಮಂಡಿಸಿದ್ದಾರೆ. ಇದು ಸರ್ಕಾರದ ಹಣ. ಈ ಸರ್ಕಾರದ ಹಣದ ಬಜೆಟ್ ಮಂಡಿಸುವಾಗ ನೀವು ಇಲಾಖೆಗಳಿಗೆ ಹಣ ತೆಗೆದಿಟ್ಟಿದ್ದೀರಿ. ಈ ರೀತಿ ತೆಗೆದಿಟ್ಟಿರತಕ್ಕಂಥ ಹಣ ಉಪಯೋಗವಾಗಿದೆಯೇ? ಸದುಪಯೋಗವಾಗಿದೆಯೇ? ಖರ್ಚಾಗಿದೆಯೇ? ಇಲ್ಲವೇ ಎಂಬುದನ್ನು ಪರಾಮರ್ಶೆ ಮಾಡುವುದೇ ಇಲ್ಲ. ಆದರೆ ದುಡ್ಡು ಮಾತ್ರ ಬಿಡುಗಡೆ ಮಾಡಬೇಕು. ನಿನ್ನೆ CAG ಯವರು ಕೊಟ್ಟ ರಿಪೋರ್ಟ್ ಅನ್ನು ನೀವು ಓದಿರಬೇಕು. 1 ಲಕ್ಷ 16 ಸಾವಿರದ 84 ಕೋಟಿ ₹ ಗಳ ತೆರಿಗೆಯನ್ನು ವಸೂಲಿ ಮಾಡಲಿಕ್ಕೆ ಆಗಿಲ್ಲವೆಂದು CAGಯವರು ತಮ್ಮ ವರದಿಯಲ್ಲಿ comment ಮಾಡಿದ್ದಾರೆ. 2005–06ರ ವರದಿಯಲ್ಲಿ ಆ ರೀತಿ ಹೇಳಿದ್ದಾರೆ. ನೀವು technical ಆಗಿ ಮಾತನಾಡುವುದಾದರೆ, ನಾನು technical ಆಗಿ ಹೇಳಿದರೆ, ನೀವು ಜಾಗ ಖಾಲಿ ಮಾಡಬೇಕಾಗುತ್ತದೆ. 1ಲಕ್ಷ 16 ಸಾವಿರ ಕೋಟಿ ₹ ಗಳ ತೆರಿಗೆ ವಸೂಲಿ ಮಾಡಲಿಕ್ಕೆ ಆಗದಿರತಕ್ಕಂಥ ಸರ್ಕಾರ ಇದು. 1 ಲಕ್ಷ 16 ಸಾವಿರ ಕೋಟಿ ₹ಗಳನ್ನು ತೆರಿಗೆ ವಸೂಲಿ ಮಾಡಲಿಕ್ಕೆ ಆಗದಿರತಕಂಥ ಸರ್ಕಾರಕ್ಕೆ ಸಾರ್ವಜನಿಕರು ಏಕೆ ಸ್ವಾಮಿ ತೆರಿಗೆಯನ್ನು ಕಟ್ಟಬೇಕು? ಅವರು ಕಟ್ಟಿದಂತಹ ತೆರಿಗೆಗೆ ನಾವೇಕೆ ಒಪ್ಪಿಗೆ ಕೊಡಬೇಕು?

ಡಾ: ವಿ.ಎಸ್. ಆಚಾರ್ಯ: 1 ಲಕ್ಷ 16 ಸಾವಿರ ಕೋಟಿ ₹ ಗಳು ಎಂಬ ಫಿಗರ್ ಮೂರು ವರ್ಷದ ಬಜೆಟ್‌ಗೆ ಸಂಬಂಧಪಟ್ಟಿದ್ದೆಂದು ಕಾಣುತ್ತದೆ. 1 ಲಕ್ಷ 16

ಸಾವಿರ ಕೋಟಿ ರೂ.ಗಳು ಎಂದರೆ ಅದೊಂದು ದೊಡ್ಡ ಮೊತ್ತ. ಅದು ಒಂದು ವರ್ಷಕ್ಕೆ ಮಾತ್ರ ಸಂಬಂಧಪಟ್ಟಿದ್ದಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನೀವು ಏನೂ ಮಾಡಲಿಲ್ಲವೆಂದು ನಾನು ಹೇಳಲಿಲ್ಲ. ನಿಮ್ಮದೂ ಅದರಲ್ಲಿ ಸೇರುತ್ತದೆ. ಕರ್ನಾಟಕ ರಾಜ್ಯದ್ದೇ ನಾನು ಹೇಳುತ್ತಿದ್ದೇನೆ.

ಡಾ: ವಿ.ಎಸ್. ಆಚಾರ್ಯ: 1 ಲಕ್ಷ ಕೋಟಿ ₹ ಗಳನ್ನು ನಾವು ಇನ್ನೂ ಮುಟ್ಟಿಯೇ ಇಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ದಯವಿಟ್ಟು ನಾನು ಹೇಳುವುದನ್ನು ಸ್ವಲ್ಪ ಕೇಳಿ. 'ರಾಜ್ಯಕ್ಕೆ ಸಾವಿರಾರು ಕೋಟಿ ರೂಪಾಯಿಗಳ ನಷ್ಟ 'ರಾಜ್ಯಕ್ಕೆ, ಕೇಂದ್ರಕ್ಕಲ್ಲ.' 2005-06ನೇ ಸಾಲಿನಲ್ಲಿ ವಾಣಿಜ್ಯ ತೆರಿಗೆ, ಅಬಕಾರಿ ಇಲಾಖೆ ಸೇರಿದಂತೆ 1 ಲಕ್ಷ 16 ಸಾವಿರ 84 ಕೋಟಿ ₹ ಗಳ ಮೊತ್ತದ ತೆರಿಗೆ ವಸೂಲಿ ಮಾಡಿಲ್ಲ'.

ಡಾ: ವಿ.ಎಸ್. ಆಚಾರ್ಯ: ಆ ಫಿಗರ್ ತಪ್ಪು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಸಾರ್, ಇದು ಈ ವರ್ಷದ್ದಲ್ಲ. ಈ ವರ್ಷದ್ದು 10 ಸಾವಿರ ಕೋಟು ₹ ಗಳು.

ಡಾ: ವಿ.ಎಸ್. ಆಚಾರ್ಯ: ಮಾನ್ಯ ಅಧ್ಯಕ್ಷರೆ,......

ಅಧ್ಯಕ್ಷರು: ಆಯಿತು ಬಿಡಿ. Let him quote. ಮಾನ್ಯ ಸಚಿವರು ಉತ್ತರ ಕೊಡುವಾಗ clarify ಮಾಡುವಿರಂತೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: 2005-06ರದ್ದು 10 ಸಾವಿರ ಕೋಟಿ ₹ ಗಳು. ಒಟ್ಟಾರೆಯಾಗಿ accumulated ಆಗಿರುವುದನ್ನು ನಾನು ಹೇಳುತ್ತಿದ್ದೇನೆ. ನಿಮ್ಮ ಪೀರಿಯಡ್‌ದ್ದು ಕೇವಲ 10 ಸಾವಿರ ಕೋಟಿ ₹ ಗಳು. ಪೂರ್ತಿಯಾಗಿ ನಾನು ಹೇಳುವವರೆಗೂ ನೀವು ಕೇಳುತ್ತಿಲ್ಲ. ನಾನು ಆಗಲೇ ಹೇಳಿದ್ದು accumulated amount. ನೀವು 10 ಸಾವಿರ ಕೋಟಿ ₹ ಗಳ ತೆರಿಗೆಯನ್ನು ವಸೂಲಿ ಮಾಡಿಲ್ಲ. ಅದನ್ನಾದರೂ ತಾವು ಒಪ್ಪುತ್ತೀರಾ? ಇದನ್ನು ನಾನು ಹೇಳಿಲ್ಲ. ನೀವು CAG report ತೆಗೆದು ನೋಡಿ. I am not the person who told this. ಇದು CAG report ನಲ್ಲಿದೆ. 10 ಸಾವಿರ ಕೋಟಿ ₹ಗಳು ಅಲ್ಲದಿದ್ದರೆ ಹೋಗಲಿ 5 ಸಾವಿರ ಕೋಟಿ ಅಥವಾ 2 ಸಾವಿರ ಕೋಟಿ ₹ ಗಳು ಎಂದಾದರೂ ಇಟ್ಟುಕೊಳ್ಳಿ. ಆ ತೆರಿಗೆಯನ್ನೂ ವಸೂಲಿ ಮಾಡಲಿಕ್ಕೆ ಯೋಗ್ಯತೆ ಇಲ್ಲದಿರತಕ್ಕಂಥ ಸರ್ಕಾರವಿದು. ಇವರಿಗೆ ಏಕೆ ಹಣ ಕೊಡಬೇಕು? ಇದಕ್ಕೋಸ್ಕರ ಇವರಿಗೆ ನಾವು ಹಣವನ್ನು ಮಂಜೂರು ಮಾಡಬೇಕೇ? ಈ ಸರ್ಕಾರ ಇವತ್ತು ಏನೆಲ್ಲಾ ಯೋಜನೆಗಳನ್ನು

ರೂಪಿಸಿದೆ ನಿಮ್ಮ ಆರ್ಥಿಕ ಅಭಿವೃದ್ಧಿ ಸರ್ವೆಯಲ್ಲಿ ಬಹಳಷ್ಟು ಹೇಳಿದ್ದಾರೆ. Development Vs. Growth ಬಗ್ಗೆ ವಿಧಾನ ಸಭೆಯಲ್ಲೂ ಮೊನ್ನೆ ಒಂದು ಸ್ವಾರಸ್ಯಕರವಾದಂತಹ ಚರ್ಚೆ ನಡೆಯಿತು. ನಮ್ಮದು ಭಾರೀ ಬೆಳವಣಿಗೆ ಆಗಿದೆ ಎಂದು ಹೇಳುತ್ತೇವೆ. ಮಾನ್ಯ ಅಧ್ಯಕ್ಷರೆ, ನಾನು ಬಹಳ ವಿನಯದಿಂದ ತಮ್ಮಲ್ಲಿ ಹೇಳುತ್ತಿದ್ದೇನೆ. I am sorry to say. Most of us do not understand the difference between Growth and Development. ನಾವು Development ಅನ್ನು Growthಗೆ Growth ಅನ್ನು Developmentಗೆ ಹೇಳಿ confuse ಮಾಡಿ, ನಾವೇನೋ ಭಾರಿ ಶ್ರೀಮಂತರಾಗಿ ಬಿಡುತ್ತಿದ್ದೇವೆ ಎನ್ನತಕ್ಕಂಥ picture ಅನ್ನು ಕೊಡಲಿಕ್ಕೆ ಹೊರಟಿದ್ದೇವೆ. ಆರ್ಥಿಕ ಬೆಳವಣಿಗೆಯಿಂದ ಹಣಕಾಸು ಉತ್ಪಾದನೆ ಆಗುತ್ತಿದೆ. ಮಾನ್ಯ ಯಡಿಯೂರಪ್ಪನವರೆ, ಹಣಕಾಸಿನ ಮಂತ್ರಿಯಾಗಿ ತಮಗೂ ಅದು ಗೊತ್ತಿದೆ. ಹಣಕಾಸಿನ ವರಮಾನ ಜಾಸ್ತಿಯಾಗುತ್ತಿದೆ. Is that the Growth? But, What is Development? Then what is meant by Development? ಅಭಿವೃದ್ಧಿ ಎಂದರೆ ಏನು? ಅಭಿವೃದ್ಧಿ ಎಂದರೆ, ನೀವು ಮಾನವ ಸಂಪನ್ಮೂಲ ಅಭಿವೃದ್ಧಿ ಎಂದು ಇನ್ನೊಂದು ವರದಿ ಕೊಟ್ಟಿದ್ದೀರಿ. ಈ ಅಭಿವೃದ್ಧಿ ಆದರೆ that is the real development. Infosysನವರಿಗೋ, ಪ್ರೇಮ್‌ಜಿಯವರಿಗೋ 39% ಲಾಭ ಬಂದು, ಹಣಕಾಸಿನ ವಹಿವಾಟು ಜಾಸ್ತಿಯಾಗಿ ಬೆಳವಣಿಗೆಯಾದರೆ ಅದು ಅಭಿವೃದ್ಧಿಯಲ್ಲ. ಅಭಿವೃದ್ಧಿ ಎನ್ನುವುದರ ಅರ್ಥವೇನು ಗೋತ್ತೇ? ಸಾಮಾನ್ಯ ಮನುಷ್ಯನೊಬ್ಬ ಕೊಂಡುಕೊಳ್ಳತಕ್ಕಂಥ ಶಕ್ತಿ ಹೆಚ್ಚಾದಾಗ ಈ ರಾಜ್ಯದ ಅಭಿವೃದ್ಧಿಯಾಗಿದೆ ಎಂದು ನಾವು ಹೇಳಬೇಕಾಗುತ್ತದೆ. ಸಾಮಾನ್ಯ ಮನುಷ್ಯನ ಕೊಂಡುಕೊಳ್ಳತಕ್ಕಂಥ ಶಕ್ತಿ, if the purchasing power of a common man increases, then only we can measure the development of a State based on the purchasing power of a common man. ಇವತ್ತು ರಾಜ್ಯದಲ್ಲಿ ಅದು ಏನಾಗಿದೆ? ಸಾಮಾನ್ಯ ಮನುಷ್ಯನ ಕೊಂಡುಕೊಳ್ಳತಕ್ಕಂಥ ಶಕ್ತಿ ಹೆಚ್ಚಾಗಿಲ್ಲ. ನೀವು ಇದರಲ್ಲಿ ಹೇಳಿದ್ದೀರಿ. ನಾನು ಅದನ್ನೆಲ್ಲಾ ಬಿಚ್ಚಿ ಓದಲಿಕ್ಕೆ ಹೋಗುವುದಿಲ್ಲ, ಇದು ನೀವೇ ಕೊಟ್ಟಿರತಕ್ಕಂಥದ್ದು ಆಗಿದೆ.

ಇದರ ಪ್ರಕಾರ ಕರ್ನಾಟಕ ರಾಜ್ಯದಲ್ಲಿ ಜಿಲ್ಲಾವಾರು ಮಾಹಿತಿಯನ್ನು ನೀವು ಕೊಟ್ಟಿದ್ದೀರಿ, how the purchasing power of a common man is decreasing ಎಂಬುದನ್ನು ಕೊಟ್ಟಿದ್ದೀರಿ. ಕೊಂಡುಕೊಳ್ಳತಕ್ಕಂಥ ಶಕ್ತಿ ಕಡಿಮೆಯಾಗುತ್ತಿದೆ. ಒಂದು ಕಡೆ

ಕೊಂಡುಕೊಳ್ಳತಕ್ಕಂಥ ಶಕ್ತಿ ಕಡಿಮೆಯಾಗುತ್ತಿದೆ, ಅದರ ಜೊತೆಯಲ್ಲಿಯೆ ಬೆಲೆ ಏರಿಕೆಯಾಗುತ್ತಿದೆ. ಬೆಲೆ ಏರಿಕೆ ಒಂದು ಕಡೆ, ಕೊಂಡುಕೊಳ್ಳತಕ್ಕಂಥ ಶಕ್ತಿ ಕಡಿಮೆಯಾಗುತ್ತಿರುವುದು ಮತ್ತೊಂದು ಕಡೆ. ಸಾಮಾನ್ಯ ಮನುಷ್ಯನಿಗೆ ಕೊಂಡುಕೊಳ್ಳತಕ್ಕಂಥ ಶಕ್ತಿ ಏತಕ್ಕೆ ಕಡಿಮೆಯಾಗುತ್ತಿದೆ? ಅವನಿಗೆ ಸ್ವತ: ಕೆಲಸ ಮಾಡಿ ಉತ್ಪಾದನೆ ಮಾಡುವ ಅವಕಾಶದಿಂದ ವಂಚಿತನಾಗಿದ್ದಾನೆ, ಆತನಿಗೆ ಸ್ವಂತ ಆದಾಯವಿಲ್ಲ. He is living as a parasite on other things. ಇವತ್ತು ಒಬ್ಬ individualಗೆ self reliance ಇಲ್ಲ. ಅವನ ಕೊಂಡುಕೊಳ್ಳತಕ್ಕಂಥ ಶಕ್ತಿಯನ್ನು ನೀವು ಹೆಚ್ಚು ಮಾಡಲಿಲ್ಲ, ಇದು ಒಂದು ಕಡೆ. ಅದರ ಪರಿಣಾಮ ಏನಾಗಿದೆ ಎಂಬುದು ಹಣಕಾಸಿನ ಮಂತ್ರಿಗಳಾಗಿ ಅದು ನಿಮಗೂ ಗೊತ್ತಿರಬೇಕು. What is the purchasing capacity of a Rupee today? ಒಂದು ರೂಪಾಯಿಯ ನಿಜವಾದ ಮೌಲ್ಯ ಇವತ್ತು ಎಷ್ಟು? What is the real purchasing power of a Rupee? It is only 13.5 paise. ಅದು ಲೆಕ್ಕಕ್ಕೆ ಎಣಿಸುವುದಕ್ಕೆ ನೂರು ಪೈಸೆ, ಆದರೆ ಅದಕ್ಕೆ ಕೊಂಡುಕೊಳ್ಳುವ ಶಕ್ತಿ ಇರುವುದು ಹದಿಮೂರುವರೆ ಪೈಸೆ ಮಾತ್ರ, ಅಂದರೆ ನಿಮ್ಮ ನೂರು ರೂಪಾಯಿ ಇದ್ದರೆ ಅದರ ನಿಜವಾದ purchasing value is 13.5%. ನೂರು ರೂಪಾಯಿ ಇದ್ದರೆ ಹದಿಮೂರುವರೆ ರೂಪಾಯಿ, ನೂರು ಪೈಸೆ ಇದ್ದರೆ ಹದಿಮೂರುವರೆ ಪೈಸೆ ಆಗುತ್ತದೆ. ಆವಾಗ, ನಾನು ಕೂಲಿ ಜಾಸ್ತಿ ಕೊಟ್ಟೆ, ಕೂಲಿ, ಜಾಸ್ತಿ ಕೊಟ್ಟೆ ಎಂದು ಶ್ರೀನಿವಾಸಗೌಡರು ಬೊಬ್ಬೆ ಹೊಡೆಯುತ್ತಿರುತ್ತಾರೆ, ಹೌದು ಕೂಲಿ ಜಾಸ್ತಿ ಕೊಟ್ಟಾಯಿತು, ಕೊಡುತ್ತಿಲ್ಲವೆಂದು ನಾನು ಹೇಳುತ್ತಿಲ್ಲ. ಆದರೆ ನೀವು ಕೊಡುತ್ತಿರುವ ನೂರು ರೂಪಾಯಿಗೆ ನಿಜವಾದ ಪರ್ಚೇಸಿಂಗ್ ಕೆಪಾಸಿಟಿ ಇರುವುದು ಹದಿಮೂರುವರೆ ರೂಪಾಯಿ ಮಾತ್ರ ಆ ಹದಿಮೂರುವರೆ ರೂಪಾಯಿ ಬೆಲೆ ಇರುವ ಕಾರಣಕ್ಕೋಸ್ಕರ ಅವನಿಗೆ ಕೊಂಡುಕೊಳ್ಳತಕ್ಕಂಥ ಶಕ್ತಿ ಕಡಿಮೆಯಾಗಿದೆ, ಅವನ ಜೀವನಮಟ್ಟ ಕುಸಿದಿದೆ.

ಶ್ರೀ ಕೆ. ಶ್ರೀನಿವಾಸಗೌಡ: ಆ ಕೂಲಿಯಿಂದಾದ ರೈತರಿಗಾದ ಡೆವಲಪ್‌ಮೆಂಟ್, ಗ್ರೋತ್ ಏನು ಎಂಬುದನ್ನು ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ಶ್ರೀರಾಮರೆಡ್ಡಿಯವರೆ, ನೀವು ಮಾತನಾಡಿ ನಾನು ಒಪ್ಪುತ್ತೇನೆ, ಆದರೆ, ಈ ದುಸ್ಥಿತಿಗೆ ಅವರು ಹಿಂದೆ ಆಡಳಿತ ನಡೆಸಿದವರು ಕಾರಣರು, ಅವರು ಏತಕ್ಕೆ ಮಾತನಾಡುತ್ತಾರೆ?

ಶ್ರೀ ಕೆ. ಶ್ರೀನಿವಾಸಗೌಡ: ಸ್ವಾಮಿ, ನೀವು 6 ವರ್ಷ ಆಳಿದಿರಿ, ನೀವು ಕೂಡ ಈ ಸರ್ಕಾರದ ಭಾಗವಾಗಿದ್ದಿರಿ, ನೀವು ಏತಕ್ಕೆ ಮಾತನಾಡುತ್ತಿರಿ, ನೀವು ಯಾವ ರೈಟ್‌ನಿಂದ ಮಾತನಾಡುತ್ತಿರಿ ಹೇಳಿ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಎನ್ ಡಿ ಎ, ಬಿಜೆಪಿ ಸರ್ಕಾರ ತನ್ನ 5 ವರ್ಷದ ಆಳ್ವಿಕೆಯಲ್ಲಿ ರೈತರ ಸ್ಥಿತಿಯನ್ನು ಏನು ಮಾಡಿದೆ ಎಂದು ಗೊತ್ತಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಾನು ಯಾರ ಪರವಾಗಿ ಯಾರ ವಿರುದ್ಧವಾಗಿ ವಕಾಲತ್ ಹಾಕುವುದಕ್ಕೆ ಬಂದಿಲ್ಲ, ಇರುವ ಪರಿಸ್ಥಿತಿಯನ್ನು ಹೇಳುತ್ತಿದ್ದೇನೆ. ಒಂದು ರೂಪಾಯಿಯ ನಿಜವಾದ ಮೌಲ್ಯ ಹದಿಮೂರುವರೆ ಪೈಸೆಯಾದಾಗ, ನೀವು ಎಷ್ಟು ಕೊಟ್ಟರೂ ಕೂಡ ಸಾಮಾನ್ಯ ಮನುಷ್ಯನ ಕೊಂಡುಕೊಳ್ಳುವ ಶಕ್ತಿ ಹೆಚ್ಚಾಗುವುದಿಲ್ಲ. ಅದರ ಪರಿಣಾಮವೇನಾಗುತ್ತದೆ? ಜೀವನದ ಮಟ್ಟ ಎಷ್ಟೆಷ್ಟು ಕುಸಿದಿದೆ ಎಂಬ ಜಿಲ್ಲಾವಾರು ಅಂಕಿ ಅಂಶಗಳನ್ನು ನೀವೇ ಕೊಟ್ಟಿದ್ದೀರಿ, ನಾನು ಅದನ್ನು ಓದುವುದಕ್ಕೆ ಹೋಗುವುದಿಲ್ಲ. ಸಾಮಾನ್ಯ ಮನುಷ್ಯನ ಜೀವನಮಟ್ಟ ಕುಸಿದಾಗ, ನೀವು ಅದನ್ನು ಅಭಿವೃದ್ಧಿ ಎಂದು ಹೇಳುತ್ತೀರಾ? ಇದನ್ನು ಒಪ್ಪಬೇಕಾ? ಹೇಳಿ. ಎರಡನೆಯದಾಗಿ, ಅಭಿವೃದ್ಧಿಗೆ ಸಂಬಂಧಿಸಿದಂತೆ ವಸ್ತುಗಳ ಉತ್ಪಾದನೆಯಾಗಿದೆಯಾ? ಅದು ಕೃಷಿರಂಗದಲ್ಲಾಗಿರಬಹುದು, ಕೈಗಾರಿಕಾ ರಂಗದಲ್ಲಾಗಿರಬಹುದು. ಆರ್ಥಿಕ ರಂಗ ಸರ್ವೆನಲ್ಲಿ ನೀವು ಕೊಟ್ಟಿರುವಂತೆ ಕೃಷಿರಂಗದ ಕಳೆದ ವರ್ಷಕ್ಕೆ ಹೋಲಿಕೆ ಮಾಡಿದರೆ ಈ ವರ್ಷದ ಗ್ರೋತ್ ಕಡಿಮೆ. ಅದು 1% ಇಳಿದಿದೆ. 2.2% ಕೃಷಿರಂಗದಲ್ಲಿ ಬೆಳವಣಿಗೆ ಇದ್ದದ್ದು 1.1%ಕ್ಕೆ ಉತ್ಪಾದನೆ ಇಳಿದಿದೆ ಎಂದು ಕೊಟ್ಟಿದ್ದಿರಿ. ಅಂದರೆ ಕೃಷಿರಂಗದಲ್ಲಿ ಉತ್ಪಾದನೆ ಕಡಿಮೆಯಾಯಿತು. ಕೈಗಾರಿಕಾ ರಂಗ, ವೃತ್ತಿಯ ವಲಯದಲ್ಲಿ 16% ಮಾತ್ರ ಉತ್ಪಾದನೆ ಗ್ರೋತ್ ಆಗಿದೆ. ಆ 16% ಗ್ರೋತ್ ಆಗಿರುವುದು ಯಾವುದೆಂದರೆ it is not the commodities, it is consumer goods. Basic things ಅಲ್ಲ ಉತ್ಪಾದನೆಯಾಗಿರುವುದು. ವಸ್ತುಗಳು ಉತ್ಪಾದನೆಯಾಗಲಿಲ್ಲ, ಕೊಂಡುಕೊಳ್ಳತಕ್ಕಂಥ ಸಾಮಾನ್ಯ ಮನುಷ್ಯನ ಶಕ್ತಿ ಹೆಚ್ಚಾಗಲಿಲ್ಲ. ಈ ರಾಜ್ಯ ಅಭಿವೃದ್ಧಿಯಾಗಿದೆ ಎಂದು ಬೊಬ್ಬೆ ಹೊಡೆಯುತ್ತಿದ್ದೀರಲ್ಲ, Should we accept it?

ಶ್ರೀ ಕೆ. ಶ್ರೀನಿವಾಸಗೌಡ: Development is part of the growth.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: No. ಅದೇ ಗೊತ್ತಿಲ್ಲದೇ ಇರುವುದು. That is the tragedy in India.

ಶ್ರೀ ಕೆ. ಶ್ರೀನಿವಾಸಗೌಡ: ಒಂದು ನಿಮಿಷ ಯಿಲ್ಡ್ ಆಗಿ ಸ್ವಾಮಿ, ಚರ್ಚೆಯಾಗುವಾಗ ವಾಸ್ತವಿಕತೆಯನ್ನು ನೇರವಾಗಿ ಹೇಳಬೇಕಾಗುತ್ತದೆ. ಈಗ ನಾನು ಹೇಳಿದೆ, What is the difference between the growth and development? ಹಾಗಾದರೆ What is the difference between test and examination? Test is a part of the examination.

In the same way development is the part of growth.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಾನು ನಿಮಗೆ ಯಿಲ್ಡ್ ಆಗಿಲ್ಲ, ಇವರು ಪದೇ ಪದೇ ಎದ್ದರೆ ನಾನು ಕುಳಿತುಕೊಳ್ಳುವುದಿಲ್ಲ. Don't say nonsense.

ಮಾನ್ಯ ಸದಸ್ಯರೊಬ್ಬರು: ಈಗ ಕುಂಬಳ ಕಾಯಿ ಕಳ್ಳನೆಂದರೆ ಹೆಗಲು ಮುಟ್ಟಿಕೊಂಡು ನೋಡಿದಂತಾಯಿತು.

ಅಧ್ಯಕ್ಷರು: ಈಗ ಮಧ್ಯದಲ್ಲಿ ಇಂಟರ್‌ಫಿಯರ್ ಆಗುವುದು ಬೇಡ. ಅವರು ಎದ್ದರೆ ಇವರು ಎತ್ತಿಕೊಳ್ಳುವುದು, ಈ ಕಡೆಯವರು ಎದ್ದರೆ ಈ ಕಡೆಯವರು ಎದ್ದುನಿಂತುಕೊಂಡು ಮಾತನಾಡುವುದೂ ಬೇಡಿ, ಗಂಭೀರವಾಗಿ ಮಾತನಾಡುತ್ತಿದ್ದಾರೆ ಮಾತನಾಡಲಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: Test & Examinationಗೆ ವ್ಯತ್ಯಾಸವೇನೆಂದು ಕೇಳಿದರೆ ಇದರಲ್ಲೇನಾದರೂ ಅರ್ಥವಿದೆಯಾ? Test is part of examination ಎಂದು ಒಪ್ಪಿಕೊಳ್ಳುವುದಕ್ಕೆ ನಾನೇನು ಪ್ರೈಮರಿ ಸ್ಕೂಲ್ ಹುಡುಗನಲ್ಲ, ಅರ್ಥವಾಯಿತಾ? Growth is different. Development is different. ಹಣ ಉತ್ಪಾದನೆಯಾಗುತ್ತಿದೆ, ನಿಜ, ಎಲ್ಲಿಂದ ಗೊತ್ತೇನು? ಶೇರ್ ಮಾರ್ಕೇಟ್‌ನಿಂದ ಉತ್ಪಾದನೆಯಾಗುತ್ತಿದೆ. ಎಕಾನಾಮಿಕ್ಸ್ ಸರ್ವೇ ತೆಗೆದುನೋಡಿ, to protect the interest of Dollars we are victimizing our own consumers. ಏತಕ್ಕೆ ಗೊತ್ತೇನು? ಡಾಲರ್ ಬೆಲೆ ಕುಸಿದರೆ Export marketಗೆ ಹೊಡೆತವಾಗುತ್ತದೆಂದು, ಇಲ್ಲಿ ನಮ್ಮ consumers ಅನ್ನು ನಾವು ಸಾಯಿಸುತ್ತಿದ್ದೇವೆ. That is the growth. ಐಟಿ ಸೆಕ್ಟಾರ್ ನಲ್ಲಿ ಇವತ್ತು ಗ್ರೋತ್ ಆಗಿದೆ. ಇಲ್ಲವೆಂದು ಹೇಳುವುದಿಲ್ಲ, that growth is not production oriented growth; that growth is not job oriented growth. You must understand it. That is the difference between growth and development. When growth is followed by production, when growth is followed by employment generation, that is the real growth, that is the part and parcel of the growth. When there is no employment, money is staked, when there is no basic goods production money is staked. What will be the fate of the economy? This is the fate of economy. That is the difference between growth and development. ಹಾಗಾಗಿ ಇವತ್ತು ಏನಾಗಿದೆ ಎಂದರೆ, ಹಣಕಾಸು ಮಾರ್ಕೆಟ್‌ನಲ್ಲಿ ಹೇರಳವಾಗಿ ಚಲಾವಣೆಯಲ್ಲಿದೆ, ಆದರೆ

ಅಗತ್ಯ ವಸ್ತುಗಳು ಮಾರ್ಕೆಟ್‌ನಲ್ಲಿ ಚಲಾವಣೆಯಲ್ಲಿಲ್ಲ. ಅದರ ಪರಿಣಾಮವೇನಾಗಿದೆ, ಅಗತ್ಯ ವಸ್ತುಗಳ ಉತ್ಪಾದನೆ ಕಡಿಮೆಯಾಗಿದೆ, ಅದು ಚಲಾವಣೆಯಲ್ಲಿಲ್ಲ. ಬೆಲೆ ಏರಿಕೆ ಏತಕ್ಕೆ ಆಗುತ್ತಿದೆ? ಹಣವಿದೆ, ಅಗತ್ಯವಸ್ತುಗಳು ಮಾರುಕಟ್ಟೆಯಲ್ಲಿ ಸಿಗುತ್ತಿಲ್ಲ, ಆಗ ಸ್ವಾಭಾವಿಕವಾಗಿ ಬೆಲೆ ಏರಿಕೆಯಾಗುತ್ತದೆ. ಬೆಲೆ ಏರಿಕೆಯಾದಾಗ ಯಾರು ಹೊಡೆತಕ್ಕೆ ಸಿಕ್ಕಿಹಾಕಿಕೊಳ್ಳುವುದು? ಸಾಮಾನ್ಯ ಮನುಷ್ಯ. ಆದುದರಿಂದ ಈ ರಾಜ್ಯದಲ್ಲಿ ಮಾನವ ಅಭಿವೃದ್ಧಿ ಕುಂಠಿತವಾಗಿದೆ ಎಂಬುದನ್ನು ನೀವೇ ಒಪ್ಪಿದ್ದೀರಿ. ಒಪ್ಪಿದ ಮೇಲೆ, ಆ ಮಾನವ ಅಭಿವೃದ್ಧಿ, ಸಾಮಾನ್ಯ ಮನುಷ್ಯ ಕೊಂಡುಕೊಳ್ಳುವ ಶಕ್ತಿಯನ್ನು ಹೆಚ್ಚು ಮಾಡುವುದಕ್ಕೆ ನೀವು ಈ ಆಯವ್ಯಯದಲ್ಲಿ ಏನಾದರೂ ಕಾರ್ಯಕ್ರಮ ಹಾಕಿದ್ದೀರಾ? ನಾನು ಇನ್ನೊಂದು ಅಂಶವನ್ನು ಕೂಡ ಸ್ಪಷ್ಟ ಮಾಡುತ್ತಿದ್ದೇನೆ, ಕೊಂಡುಕೊಳ್ಳುವ ಶಕ್ತಿಯನ್ನು ಹೆಚ್ಚು ಮಾಡುವ ಜವಾಬ್ದಾರಿ ಸಂಪೂರ್ಣವಾಗಿ ನೂರಕ್ಕೆ ನೂರರಷ್ಟು ರಾಜ್ಯ ಸರ್ಕಾರದ್ದು ಮಾತ್ರವಲ್ಲ, We should accept this reality. There is a share of Central Government also, there is responsibility of Central Government also.

ಮೇಜರ್ ಮೈನರ್ ಬೇರೆ ಪ್ರಶ್ನೆ. ಕೆಲವು ಸ್ಟೇಟ್ ಲಿಸ್ಟ್‌ನಲ್ಲಿದೆ, ಕೆಲವು ಕಂಕರೆಂಟ್ ಲಿಸ್ಟ್‌ನಲ್ಲಿದೆ, ನಿಮ್ಮ ಸ್ಟೇಟ್ ಲಿಸ್ಟ್‌ನಲ್ಲಿರುವುದಕ್ಕೆ ನೀವು ಜವಾಬ್ದಾರಾರರು ತಾನೇ? ಕೃಷಿರಂಗ, ಯಾವ ಲಿಸ್ಟ್‌ನಲ್ಲಿದೆ, ಸ್ಟೇಟ್ ಲಿಸ್ಟ್‌ನಲ್ಲಿದೆ, ಹೌದೇ? ಹಾಗಾದರೆ, ಆದರೆ ಅಭಿವೃದ್ಧಿ ಏನು ಮಾಡಿದಿರಿ? ಅದರಲ್ಲಿಯೂ ಉತ್ಪಾದನೆ ಕಡಿಮೆಯಾಗಿದೆ. I know Central Government is also having responsibility in this regard. ನಮ್ಮ ಇತಿಮಿತಿ ಒಳಗಡೆ ರಾಜ್ಯ ಇರಬೇಕು. ಈಗ ನಾವು ಏನು ಮಾಡಿದ್ದೇವೆ, ಅದಕ್ಕಾಗಿ ನಾವು ಏನು ಕಾರ್ಯಕ್ರಮಗಳನ್ನು ಹಾಕಿದ್ದೇವೆ, ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ, ನೀವು ಏನು ಮಾಡುತ್ತಿದ್ದೀರಿ? ಸತ್ತವರಿಗೆ ಒಂದು ಲಕ್ಷ, ಎರಡು ಲಕ್ಷ ರೂಪಾಯಿ ಪರಿಹಾರ ಕೊಡುತ್ತೇವೆಂದು ಘೋಷಣೆ ಮಾಡುತ್ತಿದ್ದೀರಿ. Basically, will it solve this problem? ಯಡಿಯೂರಪ್ಪನವರೇ, ಇದು ಸಮಸ್ಯೆಯನ್ನು ಶಾಶ್ವತವಾಗಿ ಪರಿಹಾರ ಮಾಡುತ್ತದಾ? ಸತ್ತ ಕುಟುಂಬದವರಿಗೆ ಎರಡು ಲಕ್ಷ ರೂಪಾಯಿಗಳ ಪರಿಹಾರ ಕೊಟ್ಟರೆ, ರೈತರ ಅತ್ಮಹತ್ಯೆಯನ್ನು ಶಾಶ್ವತವಾಗಿ ನಿಲ್ಲಿಸುತ್ತೀರಾ? ಖಂಡಿತ ನಿಲ್ಲಿಸುವುದಕ್ಕಾಗುವುದಿಲ್ಲ. ಮಾನ್ಯ ಪ್ರಧಾನ ಮಂತ್ರಿಗಳು ವಿಧರ್ಭಗೆ ಹೋಗಿ 3,000 ಕೋಟಿ ರೂಪಾಯಿಗಳ ಪ್ಯಾಕೇಜ್ ಮಾಡಿ ಕೊಟ್ಟು ಬಂದ ಮೇಲೆ, ಮೂರು ತಿಂಗಳುಗಳಲ್ಲಿ ಸಾವಿನ ಸಂಖ್ಯೆ ಜಾಸ್ತಿಯಾಯಿತು. ನಿಮ್ಮ ಪ್ಯಾಕೇಜ್ ನಿಮ್ಮ ಪರಿಹಾರದಿಂದ ರೈತರ ಆತ್ಮಹತ್ಯೆಯನ್ನು ನಿಲ್ಲಿಸುತ್ತೇವೆಂದು ಯಾರಾದರೂ ಅಂದುಕೊಂಡಿದ್ದರೆ,

they are living in a fool's paradise. ಏಕೆಂದರೆ, ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದಕ್ಕೆ ಪ್ರಮುಖ ಕಾರಣ ಇವತ್ತು ಇಡೀ ದೇಶದ ಕೃಷಿರಂಗ ಬಿಕ್ಕಟ್ಟಿನಲ್ಲಿ ಸಿಕ್ಕಿ ಹಾಕಿಕೊಂಡಿದೆ. It is in crisis. ಆ ಬಿಕ್ಕಟ್ಟು ಬಂದಿರತಕ್ಕಂತಹ ಮೂಲ ಕಾರಣ ಎಲ್ಲಿ? ಅದನ್ನು ಹುಡುಕದೇ, ನಾನು ಸತ್ತವರಿಗೆ ಪರಿಹಾರ ಕೊಡುತ್ತೇನೆಂದು ಹೇಳಿದರೆ ಆಗುವುದಿಲ್ಲ. ನಾನು ಹೆಚ್ಚು ವಿವರಗಳಿಗೆ ಹೋಗುವುದಿಲ್ಲ. ಒಂದು ಉದಾಹರಣೆ ಕೊಡುತ್ತೇನೆ. ನೀವು ರೈತರಿಗೆ ಪರಿಹಾರ ಕೊಡಬೇಡಿ. ಸಬ್ಸಿಡಿ ಕೊಡಬೇಡಿ. ಏನೂ ಕೊಡಬೇಡಿ. ಆದರೆ ಆ ರೈತನಿಗೆ ಅವನು ಬೆಳೆ ಬೆಳೆಯುವುದಕ್ಕೆ Investment cost ಇದೆಯಲ್ಲ, ಬಂಡವಾಳ ಹೂಡುತ್ತಾನಲ್ಲಾ, ಆ investment cost ನ್ನು ನೀವು ಮೊದಲು ಕಡಿಮೆ ಮಾಡಿ. ಇದು ನೀವು ಮಾಡಬೇಕಾಗಿರತಕ್ಕಂತಹ ಕೆಲಸಗಳಲ್ಲಿ ಮೊದಲನೆಯದು. Investment cost ಅನ್ನು ನೀವು ಮೊದಲು ಕಡಿಮೆ ಮಾಡಿ. Investment cost ಇವತ್ತು ಎಷ್ಟು ಹೈ ರೇಟ್‌ಗೆ ಹೋಗಿದೆ ಎಂದು ನಿಮಗೆ ಗೊತ್ತಿಲ್ಲ. ಮಾರ್ಕೆಟ್‌ನಲ್ಲಿ ಯೂರಿಯ ಸಿಗುವುದಿಲ್ಲ ಸೂಪರ್ ಸಿಗುವುದಿಲ್ಲ. Pesticides ಸಿಗುವುದಿಲ್ಲ. ಸಿಕ್ಕಿದರೆ ವಿಪರೀತ ಬೆಲೆ. ನೀವು ರೈತ ಬೆಳೆಗೆ ಏನು ಬಂಡವಾಳ ಹಾಕುತ್ತಾನೆ. ಆ Investment Cost ನ್ನು ಕಡಿಮೆ ಮಾಡಿದೇ ರೈತ ಬದುಕುವುದಕ್ಕೆ ಸಾಧ್ಯವಾಗುತ್ತದೆ ಎಂದರೆ, ನೀವು ಎಷ್ಟು ಸಬ್ಸಿಡಿ ಕೊಟ್ಟರೂ ಬದುಕುವುದಕ್ಕೆ ಸಾಧ್ಯವಿಲ್ಲ. ಇದು ಒಂದು. ಎರಡನೆಯದಾಗಿ, ರೈತ ಬದುಕಬೇಕಾದರೆ, ಅವನು ಏನು ಬಂಡವಾಳ ಹಾಕಿ ಬೆಳೆ ಬೆಳೆದಿರುತ್ತಾನೆ, ಅದಕ್ಕೆ ಸರಿಯಾದಂತಹ ಬೆಲೆಯನ್ನು ಕೊಡತಕ್ಕಂತಹ ಮಾರುಕಟ್ಟೆ ವ್ಯವಸ್ಥೆಯನ್ನು ಮಾಡಿ ನೀವು. Industrial products ಗೆ ಆದರೆ Industrial Owner ಅವನು ವಿಸ್ಕಿ ಕುಡಿದದ್ದು ಕೂಡ ಲೆಕ್ಕ ಹಾಕಿ ನನ್ನ ಬಂಡವಾಳ ಎಂದು ನಿಗದಿ ಮಾಡುತ್ತಾನೆ. Industrailist ಒಬ್ಬ ಅವನ ಕಾರ್ಖಾನೆಯಲ್ಲಿ ಒಂದು ವಸ್ತು ಉತ್ಪಾದನೆ ಆದರೆ, ಅ ವಸ್ತುವಿಗೆ ರೇಟ್ ನಿಗದಿ ಮಾಡುವಾಗ ಅವನು ಕುಡಿದ ವಿಸ್ಕಿ ಛಾರ್ಜ್ ಅದರಲ್ಲಿ ಲೆಕ್ಕ ಹಾಕಿ ನನ್ನ ಕ್ಯಾಪಿಟಲ್ ಇದು ಇದರಲ್ಲಿ ನನಗೆ ಬರತಕ್ಕಂತಹ ಲಾಭ ಎಂದು ಅವನು ರೇಟ್ ನಿಗದಿ ಮಾಡುತ್ತಾನೆ. That is all included.

Industrialist ಗೆ ಆ ಅವಕಾಶ ಇವತ್ತು ಇದೆ. ಇವತ್ತು ನಮ್ಮ ರೈತರಿಗೆ ಅವರು ಹಾಕಿದ ಶ್ರಮಕ್ಕೆ ಬೆಲೆ ಇಲ್ಲ. ಅವರು ಹಾಕಿದ ಬಂಡವಾಳಕ್ಕೂ ಬೆಲೆ ಇಲ್ಲ. ಇವತ್ತು ಅದನ್ನೂ ಯಾರೂ ನಿಗದಿ ಮಾಡುವುದಕ್ಕೆ ತಯಾರಿಲ್ಲ. I don't say it is only State Government's responsibility. ರೈತನ ಬಂಡವಾಳಕ್ಕೆ ಬೆಲೆ ಇಲ್ಲ. ರೈತನ ಶ್ರಮಕ್ಕೆ ಬೆಲೆ

ಇಲ್ಲ. ಅವನ ಬೆಳೆಗೆ ಬೆಲೆ ನಿಗದಿ ಮಾಡತಕ್ಕಂತಹ ಸಂದರ್ಭದಲ್ಲಿ ಇವು ಯಾವುವೂ ಪರಿಗಣನೆಗೆ ಬರುವುದಿಲ್ಲ. ಕೃಷಿ ಮಾರುಕಟ್ಟೆಯನ್ನು ಲಾಟರಿ ಇದ್ದ ಹಾಗೆ ಇವತ್ತು ಮಾಡಿ ಬಿಟ್ಟಿದ್ದೀರಿ. ಅವನ ಹಣೆಬರಹಕ್ಕೆ ಬಿಟ್ಟು ಬಿಡುವುದು. ಒಂದು ಸಾರಿ ಅವನಿಗೆ ಬೆಲೆ ಸಿಗುತ್ತದೆ, ಹತ್ತು ಸಲ ಬೆಲೆ ಸಿಗುವುದಿಲ್ಲ. ಯಾರ ನಿಯಂತ್ರಣವೂ ಇಲ್ಲ ಇವತ್ತು. ಕೃಷಿ ಮಾರುಕಟ್ಟೆ ರೈತರ ಉತ್ಪಾದನೆ ಮಾರಾಟ ಮಾಡತಕ್ಕಂತಹ ಸಂದರ್ಭದಲ್ಲಿ ವ್ಯಾಪಾರಸ್ತರು ಏನು ಬೆಲೆ ನಿಗದಿ ಮಾಡುತ್ತಾರೆ ಆ ಬೆಲೆಗೆ ಮಾರಾಟ ಮಾಡಲೇಬೇಕು ಅವರು. ಅಂಗಡಿಯಲ್ಲಿ ಬೆಂಕಿ ಪೊಟ್ಟಣ ತೆಗೆದುಕೊಂಡರೆ 40 ಪೈಸೆ ಎಂದು ಅವನು ಸೀಲ್ ಹೊಡೆದಿರುತ್ತಾನೆ. ನಮ್ಮ ರೈತ ಬೆಳೆದ ರಾಗಿಗೆ ಒಂದು ಕ್ವಿಂಟಾಲ್‌ಗೆ ಇಷ್ಟು ಎಂದು ನಿಗದಿ ಮಾಡುವುದಕ್ಕೆ ಅಧಿಕಾರ ಯಾರಿಗೆ ಕೊಟ್ಟಿದ್ದಾರೆ, ಇದು ಎರಡನೇ ಅಂಶ.

ಮೂರನೇ ಅಂಶ, the most important is the imbalance created between agriculture products and industrial products. Most crucial point. ಕೃಷಿರಂಗದಲ್ಲಿ ಉತ್ಪಾದನೆಯಾದ ವಸ್ತುಗಳ ಬೆಲೆಗಳಿಗೂ ಕೈಗಾರಿಕಾ ರಂಗದಲ್ಲಿ ಉತ್ಪಾದನೆಯಾದ ಬೆಳೆಗಳಿಗೂ ಅಜಗಜಾಂತರ ಅಂತರವಿದೆ. ಆದರಿಂದಲೇ ಇವತ್ತು ರೈತ ನಾಶವಾಗುತ್ತಿದ್ದಾನೆ. ಈ ಮೂರು ಕಾರಣಗಳಿಂದ ಇವತ್ತು ರೈತ ನಾಶವಾಗಿರತಕ್ಕಂಥದ್ದು. ಈ ಮೂರು ಕಾರಣಗಳಿಗೆ ನೀವು ಪರಿಹಾರ ಹುಡುಕದೇ ಏನು ಸಬ್ಸಿಡಿ ಕೊಟ್ಟಿರೂ ರೈತ ಉದ್ಧಾರವಾಗುವುದಿಲ್ಲ. ನೀವು ಏನು ಪ್ಯಾಕೇಜ್ ಕೊಟ್ಟರೂ ರೈತ ಉದ್ಧಾರವಾಗುವುದಿಲ್ಲ. ದಯವಿಟ್ಟು ಇದನ್ನು ಅರ್ಥ ಮಾಡಿಕೊಳ್ಳಿ ಇದು ನಿಮ್ಮ ಸ್ಟೇಟ್ ಲಿಸ್ಟ್‌ನಲ್ಲಿರತಕ್ಕಂಥಾದ್ದು. ಕೃಷಿರಂಗಕ್ಕೆ ನೀವು ಏನು ಕಾರ್ಯಕ್ರಮ ಹಾಕಿಕೊಡಿದ್ದೀರಿ? ಎಲ್ಲರೂ ರೈತರ ಮಕ್ಕಳೇ. ಇಲ್ಲಿರುವವರು ಎಲ್ಲರೂ ರೈತರ ಪರವಾಗಿ ಹೋರಾಟ ಮಾಡುವವರೇ. ರೈತರ ಹೆಸರು ಹೇಳದೇ ನಾವು ಒಂದು ದಿವಸವೂ ಬದುಕುವುದಿಲ್ಲ. ಯಾರು ಮಾಡಿದ್ದಾರೆ ಇದು? ಏನು ಮಾಡಿದ್ದಾರೆ. ಈ ಮೂರು ಪ್ರಶ್ನೆಗಳನ್ನು ಬಿಟ್ಟು ಉಳಿದ ಎಲ್ಲವನ್ನೂ ನಾವು ಮಾಡುತ್ತಿದ್ದೇವೆ. ಈ ಮೂರು ಮೂಲಭೂತ ಸಮಸ್ಯೆಗಳನ್ನು ಪರಿಹಾರ ಮಾಡುವುದು ಬಿಟ್ಟು, ಅದಕ್ಕೆ ಕಾರ್ಯಕ್ರಮ ಹಾಕುವುದು ಬಿಟ್ಟು, ಬೇರೆ ಎಲ್ಲವನ್ನೂ ಮಾಡುತ್ತಿದ್ದೇವೆ.

ನೀವು ಸಾಲ ಮನ್ನಾ ಮಾಡಬೇಡಿ. ಬಡ್ಡಿ ಮನ್ನಾ ಮಾಡಬೇಡಿ. ಈ ಮೂರು ಸಮಸ್ಯೆಗಳನ್ನು ಪರಿಹಾರ ಮಾಡಿ. ರೈತರು ಸ್ವಾಭಿಮಾನದಿಂದ ಬದುಕುತ್ತಾರೆ. ದಯವಿಟ್ಟು ರೈತರನ್ನು ಭಿಕ್ಷುಗಾರರನ್ನಾಗಿ ಮಾಡಬೇಡಿ. ಇವತ್ತು ಈ ಪರಿಸ್ಥಿತಿಯಲ್ಲಿ ಏನಾಗಿದೆ, ಈ

ದೇಶದಲ್ಲಿ ಅನ್ನ ಹಾಕುವವನಿಗೆ ಭಿಕ್ಷುಕನನ್ನಾಗಿ ತೋರಿಸಿದ್ದೀರಿ. ಕೊಳ್ಳೆ ಹೊಡೆಯುವವನಿಗೆ ಮಹಾರಾಜನಾಗಿ ಮಾಡಿದ್ದೀರಿ. ಈ ದೇಶದ ಸಂಪತ್ತನ್ನು ಕೊಳ್ಳೆ ಹೊಡೆಯುವವರಿಗೆ ಮಹಾರಾಜನ ಪಟ್ಟ, ಅನ್ನ ಹಾಕತಕ್ಕಂತಹವನಿಗೆ ಭಿಕ್ಷುಗಾರನ ಪಟ್ಟ ಹಾಕಿದ್ದೀರಿ. ಇದಕ್ಕೆ ನಿಮ್ಮ ಧೋರಣೆಗಳೇ ಕಾರಣ ಹೊರತು, ಇದಕ್ಕೆ ಯಾರನ್ನೂ ಹೋಣೆ ಮಾಡಲಿಕ್ಕೆ ಸಾಧ್ಯವಿಲ್ಲ. ಇದೆಲ್ಲಾ ಬಿಟ್ಟು ನೀವು ನಾವು ಎರಡು ರೂಪಾಯಿಗೆ ಅಕ್ಕಿ ಕೊಡುತ್ತೇವೆ, ಬೈಸಿಕಲ್ ಕೊಡುತ್ತೇವೆ, ಯೂನಿಫಾರಂ ಕೊಡುತ್ತೇವೆ, ಎಂದು ಹೇಳುತ್ತೀರಿ. ನೀವು ಇವು ಯಾವುದೂ ಕೊಡಬೇಡಿ. ರೈತರಿಗೆ ಮತ್ತು ಹಳ್ಳಿಗಾಡಿನ ಜನರಿಗೆ ಈ ಮೂರು ಸಮಸ್ಯೆಗಳನ್ನು ಪರಿಹಾರ ಮಾಡಿ. ನೀವು ಸೈಕಲ್ಲೂ ಕೊಡಬೇಡಿ, ಎರಡು ರೂಪಾಯಿಗೆ ಅಕ್ಕಿಯೂ ಕೊಡಬೇಡಿ, ಯೂನಿಫಾರಂ ಕೊಡಬೇಡಿ, ಮಧ್ಯಾಹ್ನದ ಊಟವೂ ಕೊಡಬೇಡಿ. ಈ ಮೂರು ಸಮಸ್ಯೆಗಳನ್ನು ನೀವು ಮೊದಲು ಪರಿಹಾರ ಮಾಡಿ. ಆ ಮೇಲೆ ರೈತರೇನಾದರೂ ಬಂದು ನಿಮ್ಮ ಹತ್ತಿರ ನಮಗೆ ಸಹಾಯ ಮಾಡಿ ಎಂದು ಕೇಳಿದರೆ ಹೇಳಿ. ಅವರು ಸ್ವಾಭಿಮಾನಿಗಳು. ಹಾಗೆಲ್ಲಾ ಅವರು ಕೇಳುವುದಿಲ್ಲ. ಈ ಸಮಸ್ಯೆಗಳ ಪರಿಹಾರ ಮಾಡಲಿಕ್ಕೆ ಇವರ ಹತ್ತಿರ ಕಾರ್ಯಕ್ರಮಗಳು ಇಲ್ಲ. ನಾವು ಕೃಷಿ ಇಲಾಖೆಗೇಕೆ ಹಣ ಮಂಜೂರು ಮಾಡಬೇಕು, ಇವತ್ತು ಕೈಗಾರಿಕೆಗಳನ್ನು ದ್ವಿತೀಯ ವಲಯದ ಬೆಳವಣಿಗೆಯಲ್ಲಿ ಕೊಟ್ಟಿದ್ದಾರೆ. ನಾನು ಭಾರೀ ವಿನಯದಿಂದ ಮಾನ್ಯ ಉಪಮುಖ್ಯಮಂತ್ರಿಗಳಿಗೆ ಕೇಳುತ್ತಿದ್ದೇನೆ. ನೀವು ಬಜೆಟ್‌ನಲ್ಲಿ ಮಠಗಳಿಗೆ, ದೇವಸ್ಥಾನಗಳಿಗೆ, ಅವರಿಗೆ, ಇವರಿಗೆ, ಆ ಟ್ರಸ್ಟ್‌ಗೆ ಈ ಟ್ರಸ್ಟ್‌ಗೆ ಎಂದು ದಾನ ಮಾಡಿದ್ದೀರಲ್ಲ, ಆ ಹಣ ಇದ್ದಿದ್ದರೆ ನಿಮ್ಮ ಮೈಸೂರು ಲ್ಯಾಂಪ್ ರಿವೈವ್ ಆಗುತ್ತಿತ್ತು. NGEF ರಿವೈವ್ ಆಗುತ್ತಿತ್ತು. ಸರ್ ಎಂ. ವಿಶ್ವೇಶ್ವರಯ್ಯರವರು ಕರ್ನಾಟಕದಲ್ಲಿ ಸ್ಥಾಪನೆ ಮಾಡಿದ ಕಾರ್ಖಾನೆಗಳೆಲ್ಲಾ ಮುಚ್ಚಿ ಹೋಗುತ್ತಿವೆ. ಅವು ತಮ್ಮ ಸ್ವಯಂಕೃತ ಅಪರಾಧದಿಂದ ನಷ್ಟಕ್ಕೆ ಒಳಗಾಗಲಿಲ್ಲ. ನಮ್ಮ ಪಾಪದ ಫಲ. ರಾಜಕಾರಣಿಗಳು ಮತ್ತು ಅಧಿಕಾರಿಗಳ ಜಾಯಿಂಟ್ ವೆಂಚರ್ ಇದೆಯಲ್ಲಾ ನಾವಿಬ್ಬರೂ ಮಾಡಿದ ಪಾಪದ ಫಲದಿಂದ ಆ ಕಾರ್ಖಾನೆಗಳು ಮುಚ್ಚಿ ಹೋಗಿವೆ ಹೊರತು, ಅವು ಸಯಂಕೃತ ಅಪರಾಧದಿಂದ ಅಲ್ಲ. ಇವತ್ತು ಕಲ್ಕತ್ತ ಮೆಟ್ರೋಗೆ ಮೋಟಾರ್‌ಗಳನ್ನು ಸರಬರಾಜು ಮಾಡಿದ್ದು ನಮ್ಮ NGEF. ಇವತ್ತು ನಮ್ಮಲ್ಲಿ ಮೆಟ್ರೋ ಮಾಡುತ್ತಿದ್ದೇವೆ, ಮೋಟರ್ ಸಪ್ಲೈ ಮಾಡಿ ಎಂದು ಬೇರೆಯವರ ಕಡೆ ನೋಡುತ್ತಿದ್ದೀರಿ.

NGEF ನ್ನು ರಿವೈವ್ ಮಾಡಬೇಕೆಂದು High Court ತೀರ್ಮಾನ ಮಾಡಿದೆ. ನೀವು ಒಪ್ಪಿದ್ದೀರಿ. High Court ಮುಂದೆ affidavit ಹಾಕಿದ್ದೀರಿ. ನಾವು ರಿವೈವ್

ಮಾಡುತ್ತೇವೆಂದು ಒಂದು ವರ್ಷ ಸಮಯ ಕೇಳಿದ್ದೀರಿ. ಇದುವರೆಗೂ ರಿವೈವ್ ಮಾಡಲಿಲ್ಲ. ಪ್ರತಿಷ್ಠಿತ ಕಾರ್ಖಾನೆ ಅದು. ಅದು ಅದರ ಅಸಾಮರ್ಥ್ಯದಿಂದ ಮುಚ್ಚಿ ಹೋಗಿದ್ದು ಅಲ್ಲ. ಅಥವಾ ಅಲ್ಲಿ ಕೆಲಸ ಮಾಡುತ್ತಿದ್ದ ನೌಕರರು ಲೂಟಿ ಹೊಡೆದು ಕಾರ್ಖಾನೆ ಮುಚ್ಚಿ ಹೋಗಿದ್ದಲ್ಲ. ಮೈಸೂರು ಲ್ಯಾಂಪ್ ಏನು ಮಾಡಿದ್ದೀರಿ, ಅದರ ವ್ಯವಹಾರವನ್ನು ಬಜಾರಿಗೆ ತಂದಿದ್ದೀರಿ. ಅದರ MD ಒಬ್ಬ ರೋಡಿನಲ್ಲಿ ಮೀಟಿಂಗ್ ಮಾಡುತ್ತಿದ್ದಾನೆಂದರೆ ಈ ಸರ್ಕಾರಕ್ಕೆ ನಾಚಿಕೆ ಆಗುವುದಿಲ್ಲವಾ? Are you not ashamed of it? An IAS officer sitting in the road and conducting Board meeting. Who is responsible for this situation? ಅದಕ್ಕೆ ಜವಾಬ್ದಾರರು ಯಾರು? ನಮ್ಮ ಮಾನ್ಯ ಯಡಿಯೂರಪ್ಪನವರು ಬಜೆಟ್ ಹಣವನ್ನು ದಾನ ಮಾಡಿದ್ದಾರಲ್ಲ ಅ ಹಣ ಉಳಿದಿದ್ದರೆ ಈ ಎರಡೂ ಕಾರ್ಖಾನೆಗಳು ರಿವೈವ್ ಆಗುತ್ತಿದ್ದವು ಈ ಎರಡೂ ಕಾರ್ಖಾನೆಗಳು ರಿವೈವ್ ಆಗಿದ್ದರೆ, ಕನಿಷ್ಠ 3,000 ಜನ ಕಾರ್ಮಿಕರಿಗೆ ಕೆಲಸ ಸಿಗುತ್ತಿತ್ತು.

NGEF ಮತ್ತು ಮೈಸೂರು ಲ್ಯಾಂಪ್ಸ್ ನಿಂದ ಜಗತ್ಪ್ರಸಿದ್ಧವಾದ ಉತ್ಪಾದನೆ ಆಗುತ್ತಿತ್ತು ಅದನ್ನು ನಾಶ ಮಾಡಿದಿರಿ. ಇವತ್ತು ಅದನ್ನು ರಿವೈವ್ ಮಾಡುವುದಕ್ಕೆ ಹಣ ಇಲ್ಲವೆಂದು ಹೇಳುತ್ತೀರಿ. ಹಣವೆಲ್ಲಾ ದಾನ ಧರ್ಮ ಮಾಡುತ್ತೀರಾ? ಯಾರ ಹಣ ಎಂದು ನೀವು ದಾನ ಧರ್ಮ ಮಾಡಿದಿರಿ? It is public money. You can't spend as you like. It has to be spent according to the development of the State. Industrial production ಆಗಿಲ್ಲ. ಕೈಗಾರಿಕಾ ವಲಯದಲ್ಲಿ ವಸ್ತುಗಳು ಉತ್ಪಾದನೆ ಆಗಲಿಲ್ಲವೆಂದು ಹೇಳುತ್ತೀರಿ? ಹೇಗೆ ಉತ್ಪಾದನೆ ಆಗುತ್ತವೆ ವಸ್ತುಗಳು ? ಇವತ್ತಿನ Industrial production ಎಷ್ಟು ಎಂದು ಹೇಳಿ. Job Creation ಎಷ್ಟು? ಇವತ್ತು ಇವರು ಇಷ್ಟೆಲ್ಲಾ ಹೇಳುತ್ತಾರೆ, ನಮ್ಮ IT, BT develop ಆಗಿದೆ, ಇವರ ಹತ್ತಿರ ಒಪ್ಪಂದ ಮಾಡಿಕೊಂಡಾಗ ಅವರು ಹೇಳಿದ್ದೇನು, 19 ಲಕ್ಷದ 760 ಜನಗಳಿಗೆ ಕೆಲಸ ಕೊಡುತ್ತೇವೆಂದು ಹೇಳಿ ಈ ಐ.ಟಿ. ಮತ್ತು ಬಿ.ಟಿ. ಯವರು ಎಂ.ಓ.ಯು. ಮಾಡಿಕೊಂಡಿದ್ದಾರೆ. ಆದರೆ what is the employment generated? Only 4,30,000 ಐ.ಟಿ. ಸೆಕ್ಟರ್‌ನವರು ಮಾಡಿರುವುದು. ಆ 4 ಲಕ್ಷದ 30 ಸಾವಿರದಲ್ಲೂ, ಕರ್ನಾಟಕದವರು ಎಷ್ಟು? ಬೇರೆ ದೇಶದವರು, ಬೇರೆ ರಾಜ್ಯದವರು ಎಷ್ಟು? ಇದರ ಲೆಕ್ಕ ತೆಗೆಯಿರಿ. ಇನ್ನು ಎರಡನೆಯದಾಗಿ in industrial sector employment generation is complete standstill except in garment ಡೈಲಿ ವೇಜಸ್‌ನಲ್ಲಿ ಕೆಲಸ ಕೊಡತಕ್ಕಂಥದ್ದು ಬಿಟ್ಟರೆ ನೀವು ಇಂಡಸ್ಟ್ರಿಯಲ್ ಸೆಕ್ಟರ್‌ನಲ್ಲಿ

ಎಂಪ್ಲಾಯ್‌ಮೆಂಟ್ ಜನರೇಶನ್ ಮಾಡಲಿಲ್ಲ. ನೀವೇ ಕೊಟ್ಟಿರತಕ್ಕಂಥ ಮಾನವ ಅಭಿವೃದ್ಧಿ ಸೂಚ್ಯಾಂಕದಲ್ಲಿ ಕರ್ನಾಟಕ ರಾಜ್ಯದಲ್ಲಿ 52 ಲಕ್ಷ ಜನರು ರಿಜಿಸ್ಟರ್ಡ್ ಅನ್-ಎಂಪ್ಲಾಯೀಸ್ ಇದ್ದಾರೆ. ಇದನ್ನು ನೀವು ಯಾವ ಆಧಾರದ ಮೇಲೆ ಹೇಳಿದ್ದೀರೆಂದರೆ 2005 ರತನಕ ಉದ್ಯೋಗ ವಿನಿಮಯ ಕಛೇರಿಯಲ್ಲಿ ನೋಂದಾವಣೆ ಮಾಡಿಕೊಂಡಿರುವ ಜನರ ಅಂಕಿಸಂಖ್ಯೆಗಳನ್ನು ನೋಡಿಕೊಂಡು ಹೇಳಿದ್ದೀರಿ. ಆದರೆ ನಿಜವಾಗಿಯೂ ನಮಗೂ ಮತ್ತು ನಿಮಗೂ, ಎಲ್ಲರಿಗೂ ವಾಸ್ತಾವಾಂಶ ಗೊತ್ತಿದೆ, 70% of the people don't go to employment exchanges at all. ಅವರು ಅಲ್ಲಿಗೆ ಹೋಗುವುದೇ ಇಲ್ಲ. ಏಕೆಂದರೆ ಅದರಿಂದ ಏನೂ ಪ್ರಯೋಜನವಿಲ್ಲವೆಂದು ಅವರಿಗೆ ಗೊತ್ತಾಗಿಬಿಟ್ಟಿದೆ. ಆದರೂ ಕೇವಲ ಉದ್ಯೋಗ ವಿನಿಮಯ ಕಛೇರಿಯಲ್ಲಿಯೇ ರಿಜಿಸ್ಟರ್ಡ್ ಮಾಡಿಸಿಕೊಂಡಿರತಕ್ಕಂಥ ಅನ್-ಎಂಪ್ಲಾಯೀಸ್‌ಗಳ ಸಂಖ್ಯೆಯೇ 52 ಲಕ್ಷ ಇದೆ. ಮಾನ್ಯ ಅಧ್ಯಕ್ಷರೆ, ಈ ಲೆಕ್ಕವನ್ನು ಇವರೇ ಕೊಟ್ಟಿರುವುದು. This is apart from unemployment in rural areas and illitrate people. ಅವರನ್ನು ಬಿಟ್ಟು ಇದನ್ನು ಕೊಟ್ಟಿರುವುದು. ಅಂದರೆ ಇವರ ಲೆಕ್ಕದ ಪ್ರಕಾರ 5 ಕೋಟಿ ಜನಸಂಖ್ಯೆಯಲ್ಲಿ 52 ಲಕ್ಷ ಜನ ವಿದ್ಯಾವಂತ ನಿರುದ್ಯೋಗಿಗಳು ಈ ರಾಜ್ಯದಲ್ಲಿ ಇದ್ದರೆ ಏನನ್ನು ನೀವು ಉತ್ಪಾದನೆ ಮಾಡುತ್ತೀರಿ? Will they not become burden on the society? ಬರ್ಡನ್ ಆದಾಗ ನೀವೇನು ಮಾಡುತ್ತೀರೆಂದರೆ ತುಪ್ಪ ಸವರುವುದಕ್ಕೆ ಹೋಗುತ್ತೀರಿ. Majority of them will become anti-social elements. ಇದಕ್ಕಾಗಿ ನೀವು ಏನು ಕಾರ್ಯಕ್ರಮವನ್ನು ಹಾಕಿದ್ದೀರಿ?

To generate employment, to increase industrial production and to increase agricultural production. ಏನು ಕಾರ್ಯಕ್ರಮವನ್ನು ಬಜೆಟ್‌ನಲ್ಲಿ ನೀವು ನಿರ್ದಿಷ್ಟವಾಗಿ ಹಾಕಿದ್ದೀರಿ ಹೇಳಿ? ಹೊಸ ಕೃಷಿ ಪಾಲಿಸಿಯನ್ನು ತಂದಿದ್ದೀರಿ, ಇಲ್ಲೊಂದು ಹೊಸ ಕೈಗಾರಿಕಾ ನೀತಿ ಇದೆ, ಇವುಗಳ ಬಗ್ಗೆ ಡಾಕ್ಯುಮೆಂಟ್ ರೀತಿಯ ಪುಸ್ತಕವನ್ನು ತಂದಿದ್ದೀರಿ. ನಾನು ಹೊಸ ಕೈಗಾರಿಕಾ ನೀತಿ ಪುಸ್ತಕದಲ್ಲಿ ಎಲ್ಲವನ್ನೂ ಹುಡುಕಿ, ಹುಡುಕಿ ನೋಡಿದೆ, ಏನಾದರೂ ಸ್ಟೇಟ್ ಗೌವರ್ನಮೆಂಟ್ ಸ್ವತಃ ಸರಕುಗಳನ್ನು ಉತ್ಪಾದನೆ ಮಾಡತಕ್ಕಂಥ ಕಾರ್ಖಾನೆಗಳನ್ನು ಸ್ಥಾಪನೆ ಮಾಡುವುದಕ್ಕೆ ಪ್ರಯತ್ನವನ್ನು ಮಾಡಿದೆಯೇ ಎಂದು ಅದರಲ್ಲಿ ನೋಡಿದೆ. ಇದರಲ್ಲಿ ನನಗಂತೂ ಎಲ್ಲೂ ಕಾಣಲಿಲ್ಲ. ಎರಡನೆಯದಾಗಿ ನಾನು ಆಗಲೇ ಕೃಷಿರಂಗದ ಉತ್ಪಾದನೆ ಕಡಿಮೆಯಾಗಿದೆಯೇಂದು ಹೇಳಿದೆ. ಇವರದು ಎಸ್ಟಿಮೇಟೆಡ್

ಗ್ರೋಥ್ ಲಾಸ್ಟ್ ಈಯರ್ ಬಜೆಟ್‌ನಲ್ಲಿ 104 ಲಕ್ಷ ಟನ್ ಆಹಾರ ಸಾಮಗ್ರಿಗಳು ಉತ್ಪಾದನೆ ಆಗಬೇಕು ಎಂದು ಇತ್ತು. ಕಡೆಗೆ ನೀವು 94 ಸಾವಿರ ಟನ್‌ಗೆ ರಾಜಿ ಮಾಡಿಕೊಂಡಿರಿ. ಆದರೆ ಆ್ಯಕ್ಚುಯಲ್ ಪ್ರೊಡಕ್ಷನ್ ಎಷ್ಟು ಆಗಿದ್ದು? 71 ಲಕ್ಷ ಟನ್ ಮಾತ್ರ.

What is the foodgrains needed for the Karnataka population? ನಮ್ಮ 5 ಕೋಟಿ ಜನಸಂಖ್ಯೆಗೆ ಒಂದು ವರ್ಷಕ್ಕೆ ಇ.ಎನ್.ಒ. ಕೊಟ್ಟಿರತಕ್ಕಂಥ ವರದಿ ಪ್ರಕಾರ 1ಲಕ್ಷ 38 ಸಾವಿರ ಟನ್ ಆಹಾರ ಉತ್ಪಾದನೆ ನಮ್ಮ ಕರ್ನಾಟಕ ರಾಜ್ಯಕ್ಕೆ ಆಗಬೇಕು. ಆದರೆ ನಮ್ಮದು ಉತ್ಪಾದನೆ ಎಷ್ಟು? ಕೇವಲ 71 ಲಕ್ಷ ಟನ್ ಮಾತ್ರ, ಅಂದರೆ almost 50% agrarian production is short in Karnataka. ಈ ರೀತಿಯಾದರೆ ಆಹಾರ ಸಾಮಗ್ರಿಗಳ ಪರಿಸ್ಥಿತಿ ಏನಾಗಬಹುದು? ಆಹಾರ ಸಾಮಗ್ರಿಗಳ ಕೊರತೆ ಉಂಟಾದಾಗ ಜನರ ಜೀವನದ ಮೇಲೆ ಯಾವ ರೀತಿ ಪರಿಣಾಮವಾಗುತ್ತದೆ ಗೊತ್ತೆ? ನೀವು ಇದಕ್ಕಾಗಿ ಏನು ಕಾರ್ಯಕ್ರಮವನ್ನು ಹಾಕಿದ್ದೀರಿ? ಸರ್ಕಾರ ಏನು ಕಾರ್ಯಕ್ರಮವನ್ನು ಹಾಕಿದೆ? ಇದಕ್ಕೆ ನಿಮ್ಮಲ್ಲಿ ಕಾರ್ಯಕ್ರಮ ಇಲ್ಲ. ಇಂಡಸ್ಟ್ರಿಯಲ್ ಪ್ರೊಡಕ್ಷನ್‌ನಲ್ಲಿ ಉತ್ಪಾದನೆ ಮಾಡುವುದಕ್ಕೆ ನಿಮ್ಮಲ್ಲಿ ಕಾರ್ಯಕ್ರಮ ಇಲ್ಲ. ನಾನು ಆಗಲೇ ಹೇಳಿದೆ, ಪ್ರೊಡಕ್ಷನ್ ಓರಿಯೆಂಟೆಡ್ ಡೆವಲಪ್‌ಮೆಂಟ್ ಇಲ್ಲದೇ ಎಂಪ್ಲಾಯ್‌ಮೆಂಟ್ ಓರಿಯೆಂಟೆಡ್ ಡೆವಲಪ್‌ಮೆಂಟ್ ಇಲ್ಲದೇ ಇರತಕ್ಕಂಥದ್ದು ಡೆವಲಪ್‌ಮೆಂಟ್ ಅಲ್ಲ, You can only create money, but not life. ಜೀವನ ಮಟ್ಟವನ್ನು ಹೆಚ್ಚು ಮಾಡುವುದಕ್ಕೆ ನಿಮಗೆ ಸಾಧ್ಯವಾಗುವುದಿಲ್ಲ. You can produce currency. Yes, we are having currency. Lot of currency we are having. ಹಣ ಸಿಕ್ಕಾಪಟ್ಟೆ ಇದೆ, ಆದರೆ ಅದರಿಂದ ಸಮಸ್ಯೆ ಪರಿಹಾರ ವಾಗುವುದಿಲ್ಲ. ಇವತ್ತು ನೀವು ಐ.ಟಿ. ಮೇಲೆ ಭಾರಿ ಡಿಪೆಂಡ್ ಆಗಿದ್ದೀರಿ. 38 ಸಾವಿರ ಕೋಟಿ ರೂಪಾಯಿಯೇನೋ ವರಮಾನ ಬರುತ್ತದೆ ಎಂದು ಮಾನ್ಯ ಯಡಿಯೂರಪ್ಪನವರೆ ನೀವು ಲೆಕ್ಕ ಹೇಳಿದಿರಿ. ನಿಮಗೆ ಈಗ ಗೊತ್ತಾಗಿರಬಹುದು now IT sector is losing its credibility because the Rupee is becoming strong. ಈಗ ರೂಪಾಯಿ ಮೌಲ್ಯ ಜಾಸ್ತಿಯಾಗುತ್ತಿದೆ ಎನ್ನುವ ಕಾರಣಕೋಸ್ಕರ ಐ.ಟಿ. ಸೆಕ್ಟರ್ ಡಿಕ್ಲೈನ್ ಆಗುತ್ತದೆ. ಅದಕ್ಕೋಸ್ಕರ ಅವರು ಏನು ಮಾಡುತ್ತಿದ್ದಾರೆಂದರೆ ಸರ್ಕಸ್ ಮಾಡುತ್ತಿದ್ದಾರೆ ಅಧ್ಯಕ್ಷರೆ. ರೂಪಾಯಿಯನ್ನು ಅಪಮೌಲ್ಯ ಮಾಡಿ ಡಾಲರ್ ಮೌಲ್ಯವನ್ನು ಹೆಚ್ಚಿಸಿದರೆ ಮಾತ್ರ ಎಕ್ಸ್‌ಪೋರ್ಟ್ ಮಾರ್ಕೆಟ್ ಉಳಿಯುವುದಕ್ಕೆ ಸಾಧ್ಯ. ಈ ಎಕ್ಸ್‌ಪೋರ್ಟ್ ಮಾರ್ಕೆಟ್‌ನ್ನು ಉಳಿಸುವುದಕೋಸ್ಕರ ಡಾಲರ್ ಬೆಲೆಯನ್ನು

ಕಾಪಾಡುವುದಕೋಸ್ಕರ ನಮ್ಮ ಜನರನ್ನು ನಾವು ಬಲಿ ಕೊಡುವುದಕ್ಕೆ ಹೊರಟ್ಟಿದ್ದೇವೆ. It is happening.

ಡಾ: ವಿ. ಎಸ್. ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು):– ನೀವು ಒಂದು ಕ್ಷಣ ಮುಂಚೆ ಹೇಳಿದಿರಿ, intrinsic value of purchasing power ಕಡಿಮೆ ಆಗುತ್ತಿದೆಯೆಂದು. ಈಗ ನೀವೇ ಹೇಳಿದಿರಿ ಡಾಲರ್‌ನ ಎದುರು ರೂಪಾಯಿ ಮೌಲ್ಯ ಸ್ಟ್ರಾಂಗ್ ಆಗುತ್ತಿದೆಯೆಂದು. It is a good sign.

Sri Jayaprakash Hegde: As against the dollar rupee is becoming stronger.

ಡಾ: ವಿ.ಎಸ್. ಆಚಾರ್ಯ:– ಡಾಲರ್‌ನ ಎದುರು ರೂಪಾಯಿ ಸ್ಟ್ರಾಂಗ್ ಆಗುತ್ತಿದೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ:– ಇಲ್ಲಿ ಕೇಳಿ, ಯಾವುದಕ್ಕೆ ಅಂದರೆ...

ಡಾ: ವಿ.ಎಸ್. ಆಚಾರ್ಯ:– ಮಾನ್ಯ ಅಧ್ಯಕ್ಷರೆ, ನಮ್ಮ ಶ್ರೀರಾಮರೆಡ್ಡಿಯವರು ಪಾರ್ಲಿಮೆಂಟಿನಲ್ಲಿ ಏನು ಭಾಷಣವನ್ನು ಮಾಡಬೇಕೋ ಅದನ್ನು ತಪ್ಪಿಹೋಗಿ ಅಸೆಂಬ್ಲಿಯಲ್ಲಿ ಮಾಡುತ್ತಿದ್ದಾರೆ. ಆಮೇಲೆ ಉಳಿದ ವಿಷಯಗಳನ್ನು ನೀವು ಏನು ಹೇಳುತ್ತಿದ್ದೀರಿ ಇದು ರಾಷ್ಟ್ರೀಯ ಸ್ತರದಲ್ಲಿ ಸೆಂಟ್ರಲ್ ಗೌವರ್ನಮೆಂಟ್ ಮುಂದೆ ಇರುವಂಥ ಪ್ರಮುಖ ಸಮಸ್ಯೆಗಳು. ನಾವು ರಾಜ್ಯ ಸರ್ಕಾರದವರು ಏನಿದ್ದರೂ ಅದನ್ನು ನಿಭಾಯಿಸಿಕೊಂಡು ನಮ್ಮ ಮಟ್ಟಿಗೆ ಸೀಮಿತವಾದಂಥ ಅಧಿಕಾರ ವ್ಯಾಪ್ತಿಯಲ್ಲಿ ನಿವಾರಣೆ ಮಾಡಬೇಕಾಗುತ್ತದೆ. ಈಗ ನೋಟ್ ಪ್ರಿಂಟ್ ಮಾಡುವ ಅಧಿಕಾರ ಇರುವುದು ಕೇಂದ್ರ ಸರ್ಕಾರಕ್ಕೆ, ಇಂಪೋರ್ಟ್ ಎಕ್ಸ್‌ಪೋರ್ಟ್ ಪೂರ್ತಿ ಎಲ್ಲ ಅದಕ್ಕೇ ಬರುತ್ತದೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ:– ಪರ್ಚೇಸಿಂಗ್ ಕೆಪ್ಯಾಸಿಟಿ ಕಡಿಮೆ ಆಗುತ್ತಿದೆ ಎಂದು ಶ್ರೀರಾಮರೆಡ್ಡಿಯವರು ಹೇಳುತ್ತಿದ್ದಾರೆ.

ಡಾ: ವಿ.ಎಸ್. ಆಚಾರ್ಯ:– ಮಾನ್ಯ ಅಧ್ಯಕ್ಷರೆ, ನನ್ನ ತಾತ್ಪರ್ಯ ಇಷ್ಟೆ, ತುಂಬ ವೈರುಧ್ಯಗಳು ಅವರ ಮಾತಿನಲ್ಲಿಯೇ ಇದೆ. ಒಂದು ಕ್ಷಣ ಹೇಳುತ್ತಾರೆ, ಮಠಮಂದಿರಗಳಿಗೆಲ್ಲಾ ಅಲ್ಪಸ್ವಲ್ಪ ಕೊಟ್ಟದ್ದನ್ನು ಏಕೆ ಕೊಟ್ಟಿರಿ ಎನ್ನುತ್ತಾರೆ. ಇನ್ನೊಂದು ಕ್ಷಣ ಹೇಳುತ್ತಾರೆ, ಹ್ಯೂಮನ್ ಡೆವಲಪ್‌ಮೆಂಟ್ ಇಂಡೆಕ್ಸ್ ಒಳ್ಳೆಯದಾಗಬೇಕು ಎನ್ನುತ್ತಾರೆ. ಹ್ಯೂಮನ್ ಡೆವಲಪ್‌ಮೆಂಟ್ ಇಂಡೆಕ್ಸ್ ಒಳ್ಳೆಯದಾಗುವುದಕ್ಕೆ ಉತ್ತಮಗೊಳ್ಳುವುದಕ್ಕೆ ಬೇಕಾದಂಥ ಕೆಲಸವನ್ನು ಇವರುಗಳು ಮಾಡಿದ್ದಾರೆ ಎನ್ನುವ ದೃಷ್ಟಿಯಿಂದಲೇ ಆ ಸಂಸ್ಥೆಗಳಿಗೆ ಸ್ವಲ್ಪ ಸ್ವಲ್ಪವಾದರೂ ನಾವು

ಏನಾದರೂ ಕೊಟ್ಟಿರುವಂಥದ್ದು. ಏಕೆಂದರೆ ಇವತ್ತು ಮಠಮಂದಿರಗಳ ಮಾಡುತ್ತಿರುವಂಥ ಎಜುಕೇಶನ್ ಕಾರ್ಯಗಳು, ಆರೋಗ್ಯ ಸಂಸ್ಥೆಗಳ ಕಾರ್ಯಗಳು, ಹೀಗೆ ಇತ್ಯಾದಿ ಕಾರ್ಯಕ್ರಮಗಳಿಗೆ ನಮ್ಮ ಒಂದು ಕೊಡುಗೆ ಕೊಡುವಂಥದ್ದನ್ನು ಕೊಟ್ಟಿದ್ದೇವೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ:- ತಾವು ಕೂಡ ಒಂದು ವಿಷಯವನ್ನು ಅರ್ಥ ಮಾಡಿಕೊಳ್ಳಬೇಕಾಗಿದೆ. ಏಕೆಂದರೆ ಎಕ್ಸೆಪ್ಟ್ ಗೌವರ್ನಮೆಂಟ್ ಯಾವ ಇನ್ಸ್‌ಟಿಟ್ಯೂಶನ್ ಮಕ್ಕಳಿಗೆ ಫ್ರಿ ಎಜುಕೇಶನ್ ಕೊಡುತ್ತದೆ ಹೇಳಿ?

ಡಾ. ವಿ.ಎಸ್. ಆಚಾರ್ಯ:- ಮಾನ್ಯ ಅಧ್ಯಕ್ಷರೆ, ಮಾನ್ಯ ಹೆಗಡೆಯವರು ಈ ಮಾತನ್ನು ಹೇಳಬಾರದು. ಉಡುಪಿಯಲ್ಲಿ ಆ ಮಠಗಳು ಮತ್ತು ಬೇರೆ ಈ ರೀತಿಯ ಸಂಸ್ಥೆಗಳು ಇದ್ದದ್ದರಿಂದ ಯು.ಆರ್. ರಾವ್‌ರವರಂಥ ಸೈಂಟಿಸ್ಟ್‌ಗಳನ್ನು ನಾವು ಆ ಸಂಸ್ಥೆಗಳಲ್ಲಿ ಅವರಿಗೆ ಉಚಿತ ಶಿಕ್ಷಣ ಕೊಟ್ಟಿದ್ದರಿಂದ ಆಯಿತು. ಇಲ್ಲದಿದ್ದರೆ ಆಗುತ್ತಿರಲಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ನಮ್ಮ ಸರ್ ಎಂ. ವಿಶ್ವೇಶ್ವರಯ್ಯನವರಿಗೆ ಯಾವ ಮಠದವರು, ಸಂಸ್ಥೆಯವರು ಫ್ರಿ ಎಜುಕೇಶನ್ ಕೊಟ್ಟಿಲ್ಲ. ಅವರು ಚಿಕ್ಕಬಳ್ಳಾಪುರದಲ್ಲಿ ಸ್ಟ್ರೀಟ್ ಲೈಟ್ ಕೆಳಗೆ ಓದಿದ್ದು.

ಶ್ರೀ ಬಸವರಾಜ ರಾಯರೆಡ್ಡಿ:- ಮಾನ್ಯ ಸಚಿವರೆ ತಾವು ಏನು ಹೇಳುತ್ತಿದ್ದೀರಿ ಅದು ಸರಿ ಇದೆ. ಈಗ ಶ್ರೀರಾಮರೆಡ್ಡಿಯವರ ಕಳಕಳಿ ಏನು, ಡಾಲರ್ ಮೌಲ್ಯ ರೂಪಾಯಿ ಎದುರಿಗೆ ಕುಸಿಯುತ್ತಿರುವುದರಿಂದ ಇಲ್ಲಿಯ ಮ್ಯಾನುಫ್ಯಾಕ್ಚರರ್ಸ್‌ಗಳಿಗೆ ಮತ್ತು ಐ.ಟಿ. ಯವರಿಗೆ ಫಾರಿನ್ ವ್ಯವಹಾರಗಳಲ್ಲಿ ಇವರಿಗೆ ತೊಂದರೆಯಾಗುತ್ತಿದೆ ಎನ್ನುವ ಮಾತನ್ನು ಅವರು ಹೇಳುತ್ತಾರೆ. ಅದಕ್ಕೆ ಏನೂ ಮಾಡುವುದಕ್ಕಾಗುವುದಿಲ್ಲ. ನೋಡಿ ಇವತ್ತು ಚೈನಾ, ಬ್ರೆಜಿಲ್, ಇಂಡಿಯಾಗಳಲ್ಲಿ GDP is growing up.. ಈಗ ನೋಡಿ ನಮ್ಮ GDP this year is 1.3 trillion. So we have joined the "Trillion Club".

ಶ್ರೀ ಬಿ.ಎಸ್. ಯಡಿಯೂರಪ್ಪ:- ಡಾಲರ್ ಮುಂದೆ ರೂಪಾಯಿ ಮೌಲ್ಯ ಜಾಸ್ತಿ ಆಗುತ್ತಿರುವುದು ನಿಮಗೆ ದುಃಖ ತರುವಂಥ ಸಂಗತಿಯೇ ಅಥವಾ ಸಂತೋಷ ಪಡುವಂಥದ್ದೋ ಹೇಳಿ?

ಶ್ರೀ ಬಸವರಾಜ ರಾಯರೆಡ್ಡಿ:- ಅದನ್ನೇ ನಾನು ಹೇಳುವುದಕ್ಕೆ ಹೊರಟಿದ್ದೇನೆ. ಮಾನ್ಯ ಅಧ್ಯಕ್ಷರೆ, India has joined the Trillion Club. ಒಟ್ಟು ಟ್ರಿಲಿಯನ್ ಜಿ.ಡಿ.ಪಿ.

ಇರುವಂಥ ಕಂಟ್ರಿಗಳು ಎಷ್ಟೆಂದರೆ ನಮ್ಮ ಇಡೀ ಜಗತ್ತಿನಲ್ಲಿ ಕೇವಲ 12 ಕಂಟ್ರಿಗಳಲ್ಲಿ ಮಾತ್ರ, ಈಗ ಬಹಳಷ್ಟು ಜಿ.ಡಿ.ಪಿ. ಗ್ರೋಥ್ ಆದುದ್ದರಿಂದ ಎಕ್ಸ್‌ಪೋರ್ಟ್ ಜಾಸ್ತಿಯಾಗುತ್ತಿದೆ. ಈ ಎಕ್ಸ್‌ಪೋರ್ಟ್ ಜಾಸ್ತಿಯಾಗಿದ್ದರಿಂದ ಸಹಜವಾಗಿ ನಮ್ಮ ದೇಶದ ಉತ್ಪಾದನೆಗಳಿಗೆ ಬೇಡಿಕೆ ಜಾಸ್ತಿಯಾಯಿತು. ಹೀಗಾಗಿ ಹಣ ಜಾಸ್ತಿ ಹರಿದುಬರುತ್ತದೆ. ಈ ಹಣ ಬರುತ್ತಿರುವುದರಿಂದ ಡಾಲರ್ ಮೌಲ್ಯ ಕುಸಿದಿದೆ. ಇದು ಒಂದು ರೀತಿಯಿಂದ ಒಳ್ಳೆಯದು. ಆದರೆ ಆಂತರಿಕವಾಗಿ ಇದರಿಂದ ಕೆಲವು ಜನರಿಗೆ ತೊಂದರೆಯಾಗುತ್ತದೆ. ಅದಕ್ಕಾಗಿ ಅವರಿಗೂ ತೊಂದರೆಯಾಗದಂತೆ ಬೇರೆ ದಾರಿಯನ್ನು ನೋಡಬೇಕು. ಭಾರತ ಸರ್ಕಾರವಾಗಲಿ, ರಾಜ್ಯ ಸರ್ಕಾರವಾಗಲಿ ಅವರಿಗೆ ಏನು ಪರಿಹಾರವನ್ನು ಕೊಡಬೇಕು ಎಂಬುದನ್ನು ನೋಡಬೇಕಾಗಿದೆಯೇ ಹೊರತು ಡಾಲರ್ ಎದುರು ರೂಪಾಯಿ ಮೌಲ್ಯ ಜಾಸ್ತಿಯಾಗಿರುವುದಕ್ಕೆ ನಾವು ಸಂತೋಷಪಡಬೇಕು. ಡಾಲರ್ ಮೌಲ್ಯ ಇನ್ನೂ ಕಡಿಮೆಯಾಗಬೇಕು. ನನ್ನ ಪ್ರಕಾರ ಡಾಲರ್ ಮೌಲ್ಯ ಎಲ್ಲಿಗೆ ಮುಟ್ಟಬೇಕೆಂದರೆ 12 ರೂಪಾಯಿಗೆ ಮುಟ್ಟಬೇಕು.

ಶ್ರೀ ಕೆ. ಶ್ರೀನಿವಾಸಗೌಡ: 1984ರಲ್ಲಿ ಆರು ರೂಪಾಯಿ ಇತ್ತು.

ಶ್ರೀ ಬಸವರಾಜ ರಾಯರೆಡ್ಡಿ: ಇವತ್ತು ಚೈನಾದಲ್ಲಿ 7 RMB ಗೆ ಒಂದು dollar ಇದೆ. ಸುಮಾರು ಆರೇಳು ವರ್ಷದ ಹಿಂದೆ China RMB, 14 to 15 RMB ಇತ್ತು. ಈಗ 7 RMBಗೆ ಬಂದಿದೆ. ನಮ್ಮ ದೇಶದಲ್ಲಿ dollar ಮೌಲ್ಯ ಕುಸಿಯುತ್ತಿದೆಯಲ್ಲ ಅದಕ್ಕೆ ನಾವು ಸಂತೋಷ ಪಡಬೇಕು ಮತ್ತು ಅದರ ಜೊತೆಗೆ ಬೇರೆ ಪರಿಹಾರವನ್ನು ಮಾಡುವುದಕ್ಕೆ ಏನು ಮಾಡಬೇಕೆಂದು ರಾಜ್ಯ ಸರ್ಕಾರ ಕಂಡುಹಿಡಿಯಲಿ.

ಶ್ರೀ ಬಿ.ಆರ್. ಪಾಟೀಲ್: ಮಾನ್ಯ ಅಧ್ಯಕ್ಷರೆ, ಮಾನ್ಯ ಶ್ರೀರಾಮರೆಡ್ಡಿಯವರೆ, ತಮ್ಮ ಚರ್ಚೆಯಲ್ಲಿ ಒಳ್ಳೆಯ ವಿಷಯವನ್ನು ಪ್ರಸ್ತಾವ ಮಾಡಿದಿರಿ. GDP ಹೆಚ್ಚಿಗೆ ಆಗಿದೆ ಎಂದು ನಾವು ಲೆಕ್ಕಾಚಾರ ಹಾಕಿ ಅಂಕಿ ಸಂಖ್ಯೆ ಹಾಕಿ ಮಾತನಾಡುತ್ತೇವೆ. ಆದರೆ ದುರ್ದೈವದಿಂದ ಏನಾಗಿದೆ ಎಂದರೆ Globalization ಬಂದುಬಿಟ್ಟು ದುಡ್ಡಿನ ವ್ಯವಹಾರ ಏನಾಗುತ್ತಿದೆ ಎಂದರೆ ಅದು ಈಗ ಯಾರ ಕೈಯಲ್ಲಿ ದುಡ್ಡು ಇದೆ ಅವರ ಕೈಯಲ್ಲಿ ದುಡ್ಡು ಬಂದಿದೆ. ಆದರೆ ದುಡ್ಡು ಇಲ್ಲದೇ ಇರುವವರಿಗೆ ದುಡ್ಡು ಬಂದಿಲ್ಲ. ನಾವು ಅಮಾಯಕ ಜನರ ತಲೆ ಎಣಿಸಿಬಿಟ್ಟು ನಾವು GDP growth ಆಗಿದೆ ಎಂದು ಲೆಕ್ಕಾಚಾರ ಹಾಕುವುದು ದಯಮಾಡಿ ಅಲ್ಲ. ಮಾನ್ಯ ಶ್ರೀರಾಮರೆಡ್ಡಿಯವರು ಹೇಳುವ ಉದ್ದೇಶ agriculture production

increase ಆಗಿದ್ದರೆ buying power ಬರುತ್ತಿತ್ತು. ಅವರಿಗೆ ತನ್ಮೂಲಕ economical ಆಗಿ ಶಕ್ತಿ ಬರುತ್ತಿತ್ತು ಎನ್ನುವುದು ಅವರ ವಾದ.

ಶ್ರೀ ಬಸವರಾಜ ರಾಯರೆಡ್ಡಿ:– Agriculture production has drastically reduced.

ಶ್ರೀ ಬಿ.ಆರ್. ಪಾಟೀಲ್:– ನೀವೆಲ್ಲಾ ಶ್ರೀಮಂತರ ಪರವಾಗಿ ಮಾತನಾಡುವವರು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:– ಮಾನ್ಯ ಅಧ್ಯಕ್ಷರೆ, ನನ್ನ ಮಾತಿನಲ್ಲಿ ಯಾವ ವೈರುಧ್ಯವೂ ಇಲ್ಲ. ನಾನು ಭಾರೀ ಸ್ಪಷ್ಟವಾಗಿ ಹೇಳುತ್ತಿದ್ದೇನೆ, currency ಹೇಗೆ ಜಾಸ್ತಿಯಾಗುತ್ತಿದೆ, ಉತ್ಪಾದನೆ ಹೇಗೆ ಹೆಚ್ಚಾಗಲಿಲ್ಲ ಎನ್ನುವುದಕ್ಕೆ ನಾನು ಅದನ್ನು ಉದಾಹರಣೆ quote ಮಾಡಿದ್ದು. ಇದಕ್ಕೆ ಕೃಷಿರಂಗದಲ್ಲಿ ಯಾರು ಜವಾಬ್ದಾರಿ? ನೀವು ತಪ್ಪಿಸಿಕೊಳ್ಳುವುದಕ್ಕೆ concurrent ಎಂದು ಹೇಳುಬಹುದು, ಆದರೆ ನೀವು ಹಾಗೆ ಲೆಕ್ಕ ಹಾಕಿದರೆ Central Government can pass every act. You cannot prevent it.

ಡಾ|| ವಿ.ಎಸ್. ಆಚಾರ್ಯ: ಮಾನ್ಯ ಅಧ್ಯಕ್ಷರೆ, ಈಗ ಅವರು currency ವಿಷಯ ಮಾತನಾಡಿದರು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ನಾನು ಯೀಲ್ಡ್ ಆಗಿಲ್ಲ, ನಾನು ಮಾತನಾಡಬೇಕು. ನನ್ನ ಮಾತಿನಲ್ಲಿ ಯಾವ ವೈರುಧ್ಯವೂ ಇಲ್ಲ. ನಾನು ಉದಾಹರಣೆಗೆ quote ಮಾಡಿದೆನೇ ಹೊರತು ಅದನ್ನು ನೀವು ಮಾಡಬೇಕಾಗಿತ್ತು ಎಂದು ನಾನು ಹೇಳಲಿಲ್ಲ. I quoted it as an example. Dollar ಗೂ ನಿಮಗೂ ಸಂಬಂಧವಿಲ್ಲ. ನನ್ನ ಒಟ್ಟು ವಿಚಾರ ಏನೆಂದರೆ ಕೃಷಿರಂಗದ ಉತ್ಪಾದನೆ ಕಡಿಮೆಯಾಯಿತು, ಕೈಗಾರಿಕಾ ರಂಗದ ಉತ್ಪಾದನೆ ಕಡಿಮೆಯಾಯಿತು ಕೊಂಡುಕೊಳ್ಳತಕ್ಕಂಥಾದ್ದು ಕಡಿಮೆಯಾಯಿತು. ಹಣ circulate ಆಗುತ್ತಿದೆ, ಆದರೆ ಜನರ ಜೀವನ ಉತ್ತಮವಾಗಲಿಲ್ಲವೆಂದು ಹೇಳುವುದಕ್ಕೆ ನಾನು ಉದಾಹರಣೆಯನ್ನು ಹೇಳಿರುವುದು. ಅದು ನಿಮ್ಮ ಜವಾಬ್ದಾರಿ ಎಂದು ಹೇಳಲಿಲ್ಲ. ಈಗ ಶಿಕ್ಷಣ ರಂಗ ಮಾನವ ಅಭಿವೃದ್ಧಿಯಲ್ಲಿ ಬಹಳ ಪ್ರಮುಖವಾದದು. ಕರ್ನಾಟಕ ರಾಜ್ಯ ಸರ್ಕಾರ ಯಾವ ದಾರಿಯಲ್ಲಿ ಹೋಗುತ್ತಿದೆ ಎನ್ನುವುದಕ್ಕೆ ಅವರು ಒಂದು committee ಮಾಡಿ ಒಂದು report ಅನ್ನು ತಂದಿದ್ದಾರೆ. The Final report of the committee ನನ್ನ ಮುಂದೆ ಇದೆ. ಈ committee ಯನ್ನು ಕರ್ನಾಟಕ ಸರ್ಕಾರ ಮಾಡಿರುವುದು.

ಈ ವರದಿಯನ್ನು ಸರ್ಕಾರಕ್ಕೆ ಒಪ್ಪಿಸಿದ್ದಾರೆ. ಈ ವರದಿಯನ್ನು ತಾವು ದಯವಿಟ್ಟು ಓದಿ ನೋಡಬೇಕು. ಈ ಸರ್ಕಾರ ರಾಜ್ಯದ ಪ್ರಾಥಮಿಕ ಶಿಕ್ಷಣವನ್ನು ಏನು ಮಾಡುವುದಕ್ಕೆ ಹೊರಟಿದೆ ಎಂದು ಗೊತ್ತಾಗುತ್ತದೆ. ಇದಕ್ಕೆ ಒಂದು committee ಮಾಡಿದ್ದಾರೆ. ಜಗನ್ನಾಥರಾವ್‌ರವರು ಇದಕ್ಕೆ Chairman ಇದರಲ್ಲಿ ಒಟ್ಟು 11 ಜನ ಸದಸ್ಯರಿದ್ದಾರೆ 7 ಜನ ಅಜೀಂ ಪ್ರೇಮ್‌ಜಿ foundation trust ನವರು ಇದ್ದಾರೆ. ಇಡೀ ಕರ್ನಾಟಕ ಸರ್ಕಾರದ ಪ್ರಾಥಮಿಕ ಶಿಕ್ಷಣವನ್ನು ಪ್ರೇಮ್‌ಜಿ foundation ಗೆ ಒಪ್ಪಿಸುವುದಕ್ಕೆ ಏನೆಲ್ಲಾ ಬೇಕು ಆ ರೀತಿಯಲ್ಲಿ ವರದಿಯನ್ನು ತಯಾರು ಮಾಡಿಸಿದ್ದಾರೆ covering entire Primary Education commencing from 1st standard to High School. ಅದರಲ್ಲಿ ಬಹಳ ಸ್ಪಷ್ಟವಾಗಿ ರಾಜ್ಯ ಸರ್ಕಾರ ಹೇಳಿದ್ದಾರೆ. ಅದರಲ್ಲಿ Headline, School quality assessment ಎಂದು ಇದೆ. The State adopted the World Bank consultant syllbus report and Initiated steps to have a common evaluation system for all elementary school children in entire state under the agies of the newly created Karnataka School Quality Assessment Organization. ಇದರ ಪೂರ್ತಿ ವಿವರಗಳನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ, ಹೇಳುವುದಕ್ಕೆ ಹೋದರೆ ಎರಡು ದಿವಸವಾಗುತ್ತದೆ.

ಇದರ main trust ಏನೆಂದರೆ No. 1 The whole Primary Education has to be handed over to Ajim Premji Trust. ಇದನ್ನು foundation trust ಗೆ ಕೊಟ್ಟುಬಿಡಬೇಕು, ಇದು No. 1 intention No.2 intention is the whole primary education should be oriented to the World Bank and International Monitory Fund. ಅದನ್ನು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಅದರಲ್ಲಿ ಮುಚ್ಚುಮರೆ ಏನೂ ಇಟ್ಟಿಲ್ಲ. ಸರ್ವಶಿಕ್ಷಣ ಅಭಿಯಾನ, now it is very much in the talk. Sarva Shikshana Abhiyana financed by World Bank. Practically Karnataka Government spending on Primary Education is very less. The major amount is coming from the World Bank. ಅದಕ್ಕೆ orientation ಆಗಿ ಅಂತರಾಷ್ಟ್ರೀಯ ಹಣಕಾಸು ಬಂಡವಾಳಕ್ಕೆ ವಿಶ್ವಬ್ಯಾಂಕಿನ ಅನುಕೂಲಕೋಸ್ಕರ ಇಡೀ ಪ್ರಾಥಮಿಕ ಶಿಕ್ಷಣವನ್ನು ಅವರು ರೂಪಿಸುತ್ತಿದ್ದಾರೆ. ನಾನು ಮಾನ್ಯ ಶ್ರೀನಿವಾಸಗೌಡರು ಒಂದನೆ ತರಗತಿಯಲ್ಲಿ ಓದುವಾಗ...

ಶ್ರೀ ಮಲ್ಲಿಕಾರ್ಜುನ ಖರ್ಗೆ: ಹಾಗಾದರೆ syllabus ಎಲ್ಲಾ ಕೂಡ ಅವರೇ ಮಾಡುತ್ತಾರ? ಅ,ಆ ಇಈ ಯಿಂದ ಹಿಡಿದುಕೊಂಡು....

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಎಲ್ಲಾ ಅವರದೇ, ಹೌದು. ಇದಕ್ಕೆ ಸರ್ಕಾರ ಒಪ್ಪಿಕೊಂಡಿದೆ. It is the final report submitted to the Government.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಹಾಗಾದರೆ ಅದರಲ್ಲಿ ಎಲ್ಲಾ ಕೂಡ ಆಚಾರ್ಯರವರ thoughts ಬರುವುದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಯಾವ ಆಚಾರ್ಯ?

ಶ್ರೀ ಮಲ್ಲಿಕಾರ್ಜುನ ಖರ್ಗೆ: ವಿ.ಎಸ್. ಆಚಾರ್ಯ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಅದು ನಾನು ಹೇಳಲಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನೀವು ಹೇಳಲಿಲ್ಲವೆಂದರೆ ಅದರ ಅರ್ಥ, ಹೌದು ಅದರಲ್ಲಿ ಸೇರಿಸಿಕೊಂಡು ಹೇಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಆಯಿತು. ಈ ಸಮ್ಮಿಶ್ರ ಸರ್ಕಾರದ ಆಲೋಚನೆಗಳು. ಇಡೀ Education system ಅನ್ನು International finance ಗೆ orientation ಆಗಿ ರೂಪಿಸುತ್ತಿದ್ದಾರೆ. ನಾನು ಮಾನ್ಯ ಶ್ರೀನಿವಾಸಗೌಡರು ಮೊದಲನೇ ತರಗತಿಯಲ್ಲಿ ಓದುವಾಗ ಒಂದನೇ ಕ್ಲಾಸ್‌ನಲ್ಲಿ ಪಾಠ ಏನಿತ್ತು ಎಂದರೆ ಇವನು ಈಶ, ಇವನು ಗಣಪ, ಇವನು ಈಶನ ಮಗ ಎಂದು ಓದುತ್ತಿದ್ದೆವು. ಇವತ್ತು ಒಂದನೇ ಕ್ಲಾಸಿನ ಪಾಠವನ್ನು ಏನು ಮಾಡುತ್ತಿದ್ದಾರೆ ಗೊತ್ತಾ ಠಣ, ಠಣ, ಠಣ, ಝಣ, ಝಣ, ಝಣ. ಜೇಬು ತುಂಬಾ ಹಣ. ಇದು ಇವತ್ತಿನ ಪಾಠ. ಹೌದು ತಾವು ಒಂದನೇ ಕ್ಲಾಸಿನ ಪುಸ್ತಕ ತೆಗೆದುನೋಡಿ. ಅಂದರೆ ಅದರ ಅರ್ಥವೆನೆಂದರೆ ನಮ್ಮ ಮಕ್ಕಳ mindset ಅನ್ನು ಅ International finance capitalಗೆ orientation ಆಗಿ ಅವರನ್ನು develop ಮಾಡಿ, ಅದರ ಜೊತೆಗೆ....

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅದರಲ್ಲಿ ಏನು ತಪ್ಪಿದೆ? ಸರ್ಕಾರ ಏನು ಮಾಡುತ್ತಿದೆ, ಅದನ್ನೇ ಅವರು ಹೇಳಿದ್ದಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: They wanted to frame the whole mind set of the children according to World Bank and IMF dictation. ಅದರ ಜೊತೆಗೆ

ಠಣ, ಠಣ, ಠಣ, ಝಣ, ಝಣ, ಝಣ ಜೇಬು ತುಂಬಾ ಹಣ. ಎಂದರೆ money is the Only matter. No other thighs matter. No human values. Money is the Only value. Nothing else. So we are moulding our childrean that way. ಅದರ ಪರಿಣಾಮ ನಾವು ಇವತ್ತು ಕಂಡಿದ್ದೇವೆ. ಏನು ಕಂಡಿದೇವೆ? ಇವತ್ತು ನಮ್ಮ eduation system ನಲ್ಲಿ ವಿದ್ಯಾಭ್ಯಾಸವನ್ನು ಪಡೆದಂತಹವರಿಗೆ social responsibility ಕಡಿಮೆಯಾಗುತ್ತಿದೆ. National commitment ಇಲ್ಲ. ಇವತ್ತು ಅವನು ಈ ದೇಶ ಹಾಳಾಗಿ ಹೋದರೂ ಪರವಾಗಿಲ್ಲ, ಇವತ್ತು ನನಗೆ ಸಂಬಳ ಬರಬೇಕು ಎಂದು ಹೇಳುತ್ತಾನೆ. ಇವತ್ತು ಕೇಳುತ್ತಾರೆ, ಯಾವ course ಗೆ ಹೋದರೆ ಹಣ ಜಾಸ್ತಿ ಸಂಪಾದನೆ ಮಾಡಬಹುದು ಎಂದು ಹೇಳುವಂತಹ ಸ್ಥಿತಿಗೆ ನಾವು ನಮ್ಮ ಮಕ್ಕಳು ಬಂದುಬಿಟ್ಟಿದ್ದೇವೆ. ಯಾವ course ಓದಿದರೆ ಹೆಚ್ಚು ಹಣ ಸಂಪಾದನೆ ಮಾಡುವುದಕ್ಕಾಗುತ್ತದೆ ಎನ್ನುವುದನ್ನು ಇದು ನಮ್ಮ ಮುಂದೆ ಇರತಕ್ಕಂಥ ಪ್ರಶ್ನೆ. They are searching for professional course ಮೊನ್ನೆ ಯಾರೋ ಮಾನ್ಯ ಸಿದ್ದರಾಮಯ್ಯನವರ ಕಡೆಯವರು ನನ್ನ ಹತ್ತಿರ ಬಂದರು. Radiology ಒಂದು MD seat ನಿಮಗೆ ಯಾರಾದರೂ ಪರಿಚಯ ಇದ್ದರೆ ಕೊಡಿಸಿ donation ಕೊಡುತ್ತೇವೆಂದು ಬಂದಿದ್ದರು. ಅದಕ್ಕೆ ಎಷ್ಟು donation ಗೊತ್ತಾ? Radiology MS seat ಗೆ ರೂ. 1,20,000,00 ಇದೆ. ಇದು ಯಾರು ಕೊಡುವುದಕ್ಕೆ ಸಾಧ್ಯವಾಗುತ್ತದೆ? ಏಕೆಂದರೆ ಅವರಿಗೆ returns ಜಾಸ್ತಿ ಬರುತ್ತದೆ. ಅದಕ್ಕೆ ಅವರು ಆ course ಬೇಕೆಂದು ಕೇಳುವುದು.

That is what I am telling. ಯಾವುದರಲ್ಲಿ ಹಣ ಹೆಚ್ಚಿಗೆ ಸಿಗುತ್ತದೋ ಆ course ಬೇಕೆಂದು ಹೋಗುವುದು ಏಕೆಂದರೆ, it is money oriented. No question of human values. No question of social responsibility. No question of National commitment. ನಮ್ಮ ದೇಶ ಹಾಳಾಗಲಿ, ಸಮಾಜ ಹಾಳಾಗಲಿ, ನನಗೆ ದುಡ್ಡು ಬೇಕು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಈಗ ಕೇವಲ ಸಂಪಾದನೆಯಲ್ಲಿ ಮಾತ್ರ ಹಣವಲ್ಲ, ಮದುವೆ ಆಗುವಾಗಲೂ ಹಣ ಸಿಗುತ್ತದಲ್ಲಾ, ಅದು ಡಿಗ್ರಿಯನ್ನು ನೋಡಿ ಕೊಡುವುದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: You are 100% right.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅದನ್ನು ನೀವು ನಿಂತುಕೊಂಡು ಕೇಳುತ್ತಿದ್ದೀರಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ನಿಮಗೂ ನಮಗೂ ಯಾರು ಕೊಡುವವರು ಇಲ್ಲ ಬಿಡಿ.

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರೆ, ಅವರು ನಿಮಗೂ ಕೊಡುವವರು ಇಲ್ಲವೆಂದು ಹೇಳುತ್ತಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನಮಗೆ ಆಗಿದೆಯಲ್ಲಾ ....

ಶ್ರೀ ಕೆ.ಎಸ್. ಈಶ್ವರಪ್ಪ: ಆಗಿದ್ದರೆ, ಅದಕ್ಕೇನಂತೆ ....

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಮ್ಮ Education system ಅನ್ನು ಯಾವ ರೀತಿಯಲ್ಲಿ ಮಾಡುತ್ತೀರಾ? ಇಲ್ಲಿ Teachers ಅನ್ನು select ಮಾಡುವುದರ ಬಗ್ಗೆ ಈ report ನಲ್ಲಿ ಒಂದು guidelines ಅನ್ನು ಕೊಟ್ಟಿದ್ದಾರೆ. ಮಾನ್ಯ ವಿ.ಎಸ್. ಆಚಾರ್ಯರವರೆ ತಾವು ಅದನ್ನು ಓದಿ ನೋಡಿ. Teacher's promotion ಗೆ ಮತ್ತು appointment ಗೆ ಒಂದು guideline ಅನ್ನು fix ಮಾಡಿದ್ದಾರೆ. promotion ಗೆ performance based promotion ಎಂದು ಹೇಳಿ ಮಾಡಿದ್ದಾರೆ. ಇದನ್ನು ಯಾರೂ ನೋಡುವವರು? ಒಬ್ಬ teacher performance ಅನ್ನು ನೋಡಿ promotion ಕೊಡುತ್ತೇವೆಂದು ಹೇಳಿದರೆ, whois the judge? who is the Person to see that performance? ಅದು ಯಾರೆಂದರೆ ಅಜೀಂ ಪ್ರೇಂಜಿ ಟ್ರಸ್ಟ್‌ನವರು. ಅಂದರೆ ಅವರು ಯಾರಿಗೆ evaluation ಮಾಡಿ, teacher post ಗೆ promotion ಕೊಡಬಹುದೆಂದು ಹೇಳಿದರೆ, ಅವರಿಗೆ ಕೊಡುವುದು. ಇನ್ನೊಂದು dangerous proposal ಇದರಲ್ಲಿ ಇದೆ. ಅದನ್ನು ಸರ್ಕಾರ ಒಪ್ಪುತ್ತಾರೋ ಬಿಡುತ್ತಾರೋ ಅದು ನನಗೆ ಗೊತ್ತಿಲ್ಲ. It is that hire and fire. ಶಾಲೆ ಇದ್ದಾಗ ಮಾತ್ರ ಪಾಠವನ್ನು ಮಾಡುವುದಕ್ಕೆ ತೆಗೆದುಕೊಳ್ಳುವುದು. ಶಾಲೆ ಇಲ್ಲದೇ ಇರುವಾಗ ಕಳುಹಿಸಿ ಬಿಡುವುದು. ಈಗ ಮೂರು ತಿಂಗಳು, ನಾಲ್ಕು ತಿಂಗಳು ರಜಾ ಇದ್ದಾಗ...

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ:- ಆಗ promotion ನ ಪ್ರಶ್ನೆ ಬರುವುದಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: That is also one promotion here. ಆಗ Whole system ಏನಾಗಬಹುದೆಂದು ನೀವು ಹೇಳಿ. Report Submit ಮಾಡಿದ್ದಾರೆ. Government has constituted a Committee.

ಅಧ್ಯಕ್ಷರು : ಆಯಿತು, ಮುಂದಕ್ಕೆ ಹೇಳಿ, ಟೈಮ್ ಆಯಿತು.

ಶ್ರೀ ಸಿದ್ದರಾಮಯ್ಯ: Report Submit ಮಾಡಿದ್ದಾರೆ. ಅದನ್ನು ಸರ್ಕಾರ ಒಪ್ಪಿಕೊಂಡಿಲ್ಲವೆಂದು ಕಾಣುತ್ತದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: Report submit ಮಾಡಿದ್ದಾರೆ. ಇದನ್ನು ಸರ್ಕಾರ ಖಂಡಿತ ಒಪ್ಪುತ್ತದೆ. ಅದರ ಜೊತೆಗೆ ನಾವು ಇದೇ ಸದನದಲ್ಲಿ, ಅಕ್ಷಯ ಪಾತ್ರೆಯ ಬಗ್ಗೆ ಇಸ್ಕಾನ್‌ನವರಿಗೆ ಕೊಟ್ಟ ಬಗ್ಗೆ ಸಾಕಷ್ಟು ಚರ್ಚೆಯಾಯಿತು, ನಾವು ಸಾಕಷ್ಟು ಆಪಾದನೆಯನ್ನು ಮಾಡಿದ್ದೇವೆ. ಇದರಲ್ಲಿ ಕೋಟ್ಯಾಂತರ ರೂಪಾಯಿಗಳು ಲೂಟಿಯಾಗುತ್ತಿದೆ. ನಮ್ಮ ಮಕ್ಕಳ ಫೋಟೊವನ್ನು ವಿದೇಶಗಳಲ್ಲಿ ಭಿಕ್ಷುಕರನ್ನಾಗಿ ತೋರಿಸಿ, ಇಸ್ಕಾನ್‌ನವರು ಹಣವನ್ನು ಲೂಟಿ ಹೊಡೆಯುತ್ತಿದ್ದಾರೆ. ನಾವು ಅದನ್ನು ಫೋಟೊ ಸಮೇತವಾಗಿ ತೋರಿಸಿದ್ದೇವೆ. ಸರ್ಕಾರ ಇದನ್ನು ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದರು. ಈ reportನಲ್ಲಿ ಏನು ಹೇಳುತ್ತಾರೆಂದರೆ, entire ಅಕ್ಷರ ದಾಸೋಹವನ್ನು ಇಸ್ಕಾನ್‌ನವರಿಗೆ ಕೊಟ್ಟು ಬಿಡುವುದು. This is a recommendation. ಈಗಾಗಲೇ ಅದು ಪ್ರಾರಂಭವಾಗಿದೆ. ಹುಬ್ಬಳ್ಳಿಯಲ್ಲಿ ಇಸ್ಕಾನ್‌ನವರು ಒಂದು ಸೆಂಟರ್ ಪ್ರಾರಂಭ ಮಾಡುತ್ತಿದ್ದಾರೆ, ಬಳ್ಳಾರಿಯಲ್ಲಿ ಇಸ್ಕಾನ್ ನವರಿಗೆ ಕೊಟ್ಟಿದ್ದೀರಿ, ಬೆಂಗಳೂರು ಸಿಟಿಯಲ್ಲಿ ಇಸ್ಕಾನ್‌ನವರಿಗೆ ಕೊಟ್ಟಿದ್ದೀರಿ. ಅಂದರೆ, it is under process.

ಶ್ರೀ ಎಂ. ಆರ್. ಸೀತಾರಾಂ: ಮಾನ್ಯ ಅಧ್ಯಕ್ಷರೆ, ಮಾನ್ಯ ಜಿ.ವಿ. ಶ್ರೀರಾಮರೆಡ್ಡಿಯವರೆ, ಬೆಂಗಳೂರಿನಲ್ಲಿ ಇಸ್ಕಾನ್‌ನವರು ಒಳ್ಳೆಯ ಕೆಲಸ ಮಾಡುತ್ತಿದ್ದಾರೆಂಬುದನ್ನು ನೋಡಿ, ಸರ್ಕಾರದವರು ಕೊಟ್ಟಿದ್ದಾರೆ. ನೀವು ನೋಡಿ ಹೇಳುವುದು ಒಳ್ಳೆಯದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಹೌದು, ಸರ್ಕಾರದಿಂದ ರೂ. 3.20 ಪೈಸೆಯಂತೆ ಹಣವನ್ನು ತೆಗೆದುಕೊಂಡು, ರೂ. 6.80 ಪೈಸೆ ಖರ್ಚಾಗುತ್ತದೆಂದು ವಿದೇಶಗಳಿಗೆ ಹೋಗಿ, ಮಕ್ಕಳ ಫೋಟೊಗಳನ್ನು ತೋರಿಸಿ, ಹಣವನ್ನು ವಸೂಲಿ ಮಾಡುತ್ತಿದ್ದಾರೆ. ಅದು ಅವರು ಮಾಡುತ್ತಿರುವ ಒಳ್ಳೆಯ ಕೆಲಸ.

ಶ್ರೀ ಎಂ. ಆರ್. ಸೀತಾರಾಂ: ಅದನ್ನು ನಿಯಂತ್ರಣ ಮಾಡಬಹುದು. ಆದರೆ ಸರ್ಕಾರ ಅವರಿಗೆ ಕೊಟ್ಟಿರುವುದು ತಪ್ಪೆಂದು ಹೇಳುವಂಥಾದ್ದು, ತಪ್ಪಾಗುತ್ತದೆ.

ಶ್ರೀ ಜಿ.ವಿ ಶ್ರೀರಾಮರೆಡ್ಡಿ: ಆದರೆ ಎಲ್ಲೂ ಕೂಡ ಇಸ್ಕಾನ್‌ನವರು ಇದು ಸರ್ಕಾರದ ಕಾರ್ಯಕ್ರಮವೆಂದು ಹೇಳುವುದಿಲ್ಲ.

ಶ್ರೀ ಎಂ. ಆರ್. ಸೀತಾರಾಂ: ಮಾನ್ಯ ಜಿ.ವಿ ಶ್ರೀರಾಮರೆಡ್ಡಿಯವರೆ, ನೀವು ಆಧಾರ ಇಲ್ಲದೇ ಅಪಾದನೆ ಮಾಡುವಂಥಾದ್ದು, ತಪ್ಪಾಗುತ್ತದೆ.

(ಗೊಂದಲ)

ನೆ.ಲ. ನರೇಂದ್ರ ಬಾಬು: ಇಸ್ಕಾನ್‌ನವರು ಒಳ್ಳೆಯ ಕೆಲಸವನ್ನು ಮಾಡುತ್ತಿದ್ದಾರೆಂದು ಹೇಳಲೇ ಬೇಕಾಗುತ್ತದೆ. ಬೇರೆ ಯಾವ ಧರ್ಮ ಸಂಸ್ಥೆಗಳೂ ಮಾಡುತ್ತಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಹಾಗಾದರೆ ಒಂದು ತನಿಖೆಯನ್ನು ಮಾಡಲಿ.

ಶ್ರೀ ಎಂ.ಆರ್. ಸೀತಾರಾಂ: ಮಾನ್ಯ ಶ್ರೀರಾಮರೆಡ್ಡಿಯವರೆ, ಅವರು ಅಲ್ಲಿಗೆ ಹೋಗಿ ಏನು ಭೀಕ್ಷೆಯನ್ನು ತೆಗೆದುಕೊಳ್ಳುತ್ತಿದ್ದಾರೆ. ಅದನ್ನು ನಿಲ್ಲಿಸಿ ಎಂದು ನೀವು ಸರ್ಕಾರಕ್ಕೆ ಒತ್ತಡ ಮಾಡಿ ನೀವು ಒಳ್ಳೆಯ ಕೆಲಸ ಮಾಡುವುದನ್ನು ಯಾವತ್ತು obilge ಮಾಡಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಹೌದು, ಇದೇ ಒಳ್ಳೆಯ ಕೆಲಸ ಮಾಡುತ್ತಿರುವುದು. ಅವರು ಇನ್ನೊಂದು ಒಳ್ಳೆಯ ಕೆಲಸವನ್ನು ಮಾಡುತ್ತಿದ್ದಾರೆ. ಸರ್ಕಾರದಿಂದ ಒಂದು ಮಗುವಿಗೆ ರೂ. 3.60 ಪೈಸೆಯನ್ನು ತೆಗೆದುಕೊಂಡು, ಇದು ಸರ್ಕಾರದ ಕಾರ್ಯಕ್ರಮವೆಂದು ಅವರು ಎಲ್ಲೂ ಹೇಳುವುದಿಲ್ಲ. ಅದು ಒಂದು ಒಳ್ಳೆಯ ಕೆಲಸವೇ...

ಶ್ರೀ ಎಂ.ಆರ್. ಸೀತಾರಾಂ: ನಾವು ತಿಳಿದುಕೊಂಡಿರುವುದು ಮಾತನಾಡುವುದು ಒಳ್ಳೆಯದು. ಸರ್ಕಾರದ ಕಾರ್ಯಕ್ರಮವನ್ನು ಇಸ್ಕಾನ್‌ಗೆ ವಹಿಸಿರುವುದೆಂದು ಎಲ್ಲಾ ಕಡೆಯಲ್ಲೂ ಪ್ರಚಾರ ಮಾಡಿರುವುದು.

(ಗೊಂದಲ)

ಅಧ್ಯಕ್ಷರು: ಮಾನ್ಯ ಜಿ.ವಿ. ಶ್ರೀರಾಮರೆಡ್ಡಿಯವರೆ, ತಾವು ಮಾತನಾಡಲು ಶುರು ಮಾಡಿ 75 ನಿಮಿಷಗಳು ಆಯಿತು. ನೀವು ಇನ್ನು 5 ನಿಮಿಷಗಳಲ್ಲಿ ನಿಮ್ಮ ಭಾಷಣವನ್ನು ಮುಗಿಸಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ನನಗೆ ಮಧ್ಯೆ ಮಧ್ಯೆ interfere ಆದರೆ ನಾನು ಏನು ಮಾಡುವುದು?

ಅಧ್ಯಕ್ಷರು: ನಾನು ಏನೂ ಮಾಡುವುದಕ್ಕೆ ಆಗುವುದಿಲ್ಲ, ನಿಮಗೆ ಇನ್ನು 5 ನಿಮಿಷ ಕಾಲಾವಕಾಶವನ್ನು ಕೊಡುತ್ತೇನೆ.

ಶ್ರೀ ಎಂ.ಆರ್. ಸೀತಾರಾಂ: ಮಾನ್ಯ ಅಧ್ಯಕ್ಷರೆ, ಇವರು ಆಧಾರವಿಲ್ಲದೇ ಮಾತನಾಡಿದರೆ, ನಾವು interfere ಮಾಡಬೇಕಾಗುತ್ತದೆ. ಮಾನ್ಯ ಶ್ರೀರಾಮರೆಡ್ಡಿಯವರೆ, ಯಾವುದು

ಆಧಾರವಿರುತ್ತದೆ, ಅದನ್ನು ಮಾತನಾಡಿ. ಇಸ್ಕಾನ್ ಮೇಲೆ ಸುಮ್ಮನೆ ನೀವು ಮಾತನಾಡುವುದು ತಪ್ಪಾಗುತ್ತದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಇವು ಹೇಗೆ ಲೂಟಿ ಹೊಡೆಯುತ್ತಿದ್ದಾರೆಂಬ ಬಗ್ಗೆ ನಾವು ದಾಖಲೆಗಳನ್ನು ತೋರಿಸಿದ್ದೇವೆ.

ಅಧ್ಯಕ್ಷರು: ಆಯಿತು, ನೀವು ಮಾತನಾಡಿ, ಆ ವಿಷಯ ಚರ್ಚೆ ಆಯಿತಲ್ಲಾ...

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಾನು ಸರ್ಕಾರವನ್ನು ಕೇಳುತ್ತಿದ್ದೇನೆ. ನಿಮ್ಮನ್ನು ಕೇಳಲಿಲ್ಲ.

(ಗೊಂದಲ)

ಶ್ರೀ ಎಂ.ಆರ್. ಸೀತಾರಂ: ಮಾನ್ಯ ಶ್ರೀರಾಮರೆಡ್ಡಿಯವರೆ, ತಾವು ನಿರಾಧಾರವಾದ ಅಪರಾಧವನ್ನು ಮಾಡಬಾರದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಾವು ದಾಖಲೆಗಳನ್ನು ಕೊಟ್ಟು ಹೇಳಿದ್ದೇವೆ, ಇದು ನಿರಾಧಾರವಲ್ಲ. We showed documents.

ಅಧ್ಯಕ್ಷರು : ತಾವು ಬೇರೆ ವಿಚಾರಗಳನ್ನು ಮಾತನಾಡಿ.

ಡಾ॥ ಹೆಚ್.ಸಿ. ಮಹದೇವಪ್ಪ : ಮಾನ್ಯ ಅಧ್ಯಕ್ಷರೆ, ಸರ್ಕಾರ ಪ್ರಾಥಮಿಕ ಶಿಕ್ಷಣ, ಪ್ರಾಥಮಿಕ ಆರೋಗ್ಯ, ಆಹಾರ, ಕುಡಿಯುವ ನೀರಿನಂಥಾ ಸಾರ್ವಜನಿಕ ವಿಚಾರಗಳಲ್ಲಿ, ಖಾಸಗಿಯವರಿಗೆ ವಹಿಸುವಂಥಾದ್ದು ಸರಿಯಲ್ಲ. ಅದು ರಾಜ್ಯಾಂಗಕ್ಕೆ ವಿರುದ್ಧವಾದ ಸಂಗತಿಯಾಗುತ್ತದೆ. ಅದಕ್ಕೆ ಅವಕಾಶವನ್ನು ಕೊಡಬಾರದೆಂದು, ನಾನು ತಮ್ಮ ಮೂಲಕ ಸರ್ಕಾರದಲ್ಲಿ ಮನವಿಯನ್ನು ಮಾಡುತ್ತೇನೆ. NGO ಗಳು ಬಡವರ ಹೆಸರಿನಲ್ಲಿ ಪ್ರಾಥಮಿಕ ಶಿಕ್ಷಣ, ಪ್ರಾಥಮಿಕ ಆರೋಗ್ಯದ ಹೆಸರಿನಲ್ಲಿ ಅಂತರಾಷ್ಟ್ರೀಯ ಮಟ್ಟದಲ್ಲಿ ಹಣವನ್ನು ಸಂಗ್ರಹಣೆ ಮಾಡಿ, ತಮ್ಮ ಸಂಸ್ಥೆಯನ್ನು ಬಲಪಡಿಸಿ, ಇಡೀ ಸರ್ಕಾರದ ಬುಡವನ್ನೇ ಅಲ್ಲಾಡಿಸುವಂಥಾ ಕೆಲಸಕ್ಕೆ ಕೈ ಹಾಕುವಂಥಾದ್ದಕ್ಕೆ ಯಾವುದೇ ಸರ್ಕಾರ ಅವಕಾಶ ಕೊಡಬಾರದೆಂದು ನಾನು ಮನವಿ ಮಾಡುತ್ತೇನೆ.

ಅಧ್ಯಕ್ಷರು: ಮಾನ್ಯ ಜಿ.ವಿ. ಶ್ರೀರಾಮರೆಡ್ಡಿಯವರೆ, ತಾವು ಮಾತನಾಡಲು ಪ್ರಾರಂಭ ಮಾಡಿ ಒಂದು ಗಂಟೆ 25 ನಿಮಿಷಗಳಾಯಿತು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ನಾನು ಏನು ಮಾಡಲಿ, ಮಧ್ಯೆ ಮಧ್ಯೆ interfere ಆಗಿ ಟೈಮ್ ತೆಗೆದುಕೊಂಡರೆ, ನೀವು ಅದನ್ನು ನನ್ನ ಲೆಕ್ಕಕ್ಕೆ ಹಾಕಿ ಬಿಟ್ಟರೆ ಏನು ಮಾಡುವುದು?

ಅಧ್ಯಕ್ಷರು: Interfere ಆಗಿದ್ದು, ಕಡಿಮೆ, ತಾವು ದಯಮಾಡಿ ಇನ್ನು 5 ನಿಮಿಷಗಳಲ್ಲಿ ತಮ್ಮ ಭಾಷಣವನ್ನು ಮುಗಿಸಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ಇಡೀ ಪ್ರಾಥಮಿಕ ಶಿಕ್ಷಣವನ್ನು ವರ್ಲ್ಡ್ ಬ್ಯಾಂಕ್‌ನ ನಿಯಂತ್ರಣಕ್ಕೆ ಒಳಪಡಿಸಿರುವಂಥದ್ದು. ಇನ್ನೊಂದು ಇದನ್ನು ಸಂಪೂರ್ಣವಾಗಿ ಖಾಸಗಿಯವರಿಗೆ ಒಪ್ಪಿಸುವಂಥದ್ದು, ಈ ರಾಜ್ಯಕ್ಕೆ ಗಂಡಾಂತರಕಾರಿ, ಇದನ್ನು ಕೇಂದ್ರ ಸರ್ಕಾರ ಮಾಡಿಲ್ಲ. ನೀವು ಮಾಡುತ್ತಿರುವಂಥಾ ಪ್ರಯತ್ನ ಇದು, ಇದನ್ನು ನೀವು ತಕ್ಷಣ ನಿಲ್ಲಿಸಬೇಕು. ಇದನ್ನು ನಿಲ್ಲಿಸದೇ ಹೋದರೆ ಪ್ರಾಥಮಿಕ ಶಿಕ್ಷಣಕ್ಕೆ ಉಳಿಗಾಲವಿಲ್ಲ. ಬಡವರಿಗೆ ಶಿಕ್ಷಣ ಸಿಗುವುದಿಲ್ಲ, ಅಲ್ಪ ಸಂಖ್ಯಾತರಿಗೆ ಶಿಕ್ಷಣ ಸಿಗುವುದಿಲ್ಲ, ದಲಿತರಿಗೆ ಶಿಕ್ಷಣ ಸಿಗುವುದಿಲ್ಲ, ಹಿಂದುಳಿದವರಿಗೆ ಶಿಕ್ಷಣ ಸಿಗುವುದಿಲ್ಲ. ಹಣ ಇದ್ದವರು ಮಾತ್ರ ಓದಲು ಸಾಧ್ಯವಾಗುತ್ತದೆ. ಹಣವಿಲ್ಲದೇ ಇರುವವರು ಓದುವುದಕ್ಕೆ ಸಾಧ್ಯವಾಗುವುದಿಲ್ಲ. ದಯವಿಟ್ಟು ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಬೇಕು. ಇನ್ನೊಂದು ವಿಷಯವೆಂದರೆ, ಉನ್ನತ ಶಿಕ್ಷಣ, ಇದನ್ನು ಇವತ್ತು ನೀವು ಸಂಪೂರ್ಣವಾಗಿ ಕೈ ಬಿಟ್ಟಿದ್ದೀರಿ. ParticularlyTechnical Education& Medical Education ಬಗ್ಗೆ ಇವತ್ತು ಸರ್ಕಾರಕ್ಕೆ ತೊಳೆದುಕೊಂಡು ಬಿಟ್ಟಿದೆ. ಖಾಸಗಿ ವಿದ್ಯಾ ಸಂಸ್ಥೆಗಳ ಮುಂದೆ ನೀವು ನಿಸ್ಸಹಾಯಕವಾಗಿ ನಿಂತಿದ್ದೀರಿ, ಅಸಹಾಯಕರಾಗಿ ನಿಂತಿದ್ದೀರಿ. ಇವತ್ತು ಉನ್ನತ ಶಿಕ್ಷಣವನ್ನು ಮಾರಾಟ ಮಾಡತಕ್ಕಂತಹ ಸ್ಥಿತಿಗೆ ಬಂದಿದ್ದಾರೆ. Particularly Technical Education. ನೀವು ತಾಂತ್ರಿಕ ಶಿಕ್ಷಣಕ್ಕೆ, ವೈದ್ಯಕೀಯ ಶಿಕ್ಷಣಕ್ಕೆ ಮಹತ್ವ ಕೊಡಬೇಕೆಂಬ ಒಂದೇ ಒಂದು ದೃಷ್ಟಿಯಿಂದ ಅದನ್ನು ಕೊಡಬೇಕು, ಕೊಡಬಾರದೆಂದು ನಾನು ಹೇಳುವುದಿಲ್ಲ. We need Technical Education. ನಮಗೆ Higher Technology ಬೇಕು. ಈ ದೇಶಕ್ಕೆ ಉನ್ನತ ತಂತ್ರಜ್ಞಾನ ಬೇಕು. ಆವರ ಹೆಸರಿನಲ್ಲಿ don't be under the impression that only technocrates will rule this country, They are the only property in this country. ಅವರು ಮಾತ್ರವೇ ಈ ದೇಶಕ್ಕೆ ಅರ್ಹರು, ಅವರಿಂದ ಮಾತ್ರವೇ ಈ ದೇಶಕ್ಕೆ ಪ್ರಯೋಜನವಾಗುತ್ತದೆಂಬ impression ನಲ್ಲಿ ಇರಬೇಡಿ. ನಮ್ಮ ರೈತರು ಖಾಕಿ ನಿಕ್ಕರ್ ಹಾಕಿಕೊಂಡು ಹೊಲ ಉಳತಕ್ಕಂಥ ರೈತ ಸೇವೆ ಮಾಡಿದಷ್ಟು, ಈ ದೇಶಕ್ಕೆ ಇವನು ಸೇವೆ ಮಾಡುವುದಕ್ಕೆ ಆಗುವುದಿಲ್ಲ. ಹೊಲದಲ್ಲಿ ಗದ್ದೆಗಳಲ್ಲಿ ಕೆಲಸ ಮಾಡಿದವರು, ಅವರು ಈ ದೇಶಕ್ಕೆ ಸೇವೆ ಮಾಡಿದಷ್ಟು ನಿಮ್ಮ technocrates ಮಾಡುವುದಕ್ಕೆ ಆಗುವುದಿಲ್ಲ ಇವತ್ತು ನಿಮ್ಮ technocrat ಆಗಿದ್ದಾರೆಂದರೆ, ಯಾವ Multi National Company ಹೆಚ್ಚು ಸಂಬಳವನ್ನು ಕೊಡುತ್ತದೋ ಆ company

ಗೆ ಇವತ್ತು ಜಂಪ್ ಆಗುತ್ತಿದ್ದಾರೆ. ನಿಮ್ಮ ದೇಶದಲ್ಲಿ ಅವರು ಉಳಿದಿಲ್ಲ. ನಿಮ್ಮ ದೇಶಕ್ಕೋಸ್ಕರ ಅವರು ಕೆಲಸ ಮಾಡುತ್ತಿಲ್ಲ. Whichever company offers highest salary, they are going. You must mind it. ಆದರೆ ನೀವು ನಮ್ಮ ರಾಜ್ಯದ ಹಣವನ್ನು ಖರ್ಚು ಮಾಡಿ, ನಮ್ಮ ರಾಜ್ಯದ ಅಭಿವೃದ್ಧಿಗೆ ಬಳಸುವುದರ ಬದಲು, ನಮ್ಮ ರಾಜ್ಯದ ಹಣದಲ್ಲಿ ಅವರು ವಿದ್ಯಾವಂತರಾಗುವುದು, ಬೇರೆ ದೇಶಕ್ಕೆ ಹೋಗುವುದು. ಮಾನ್ಯ ವಿ.ಎಸ್. ಆಚಾರ್ಯರವರೆ, ನೀವು ಡಾಕ್ಟರ್ ಆಗಿದ್ದೀರಿ, ನೀವು ಹೇಳಿ ನೀವು Medical Education Minister ಆಗಿದ್ದೀರಿ. Please tell me honestly. How many Doctors are going out of this country? At whose cost? ನೀವು ಹೇಳಬೇಕಾದರೆ. ಎಷ್ಟು ಜನ ಡಾಕ್ಟರ್‌ಗಳು ಒಂದು ವರ್ಷಕ್ಕೆ ನಮ್ಮ ದೇಶವನ್ನು ಬಿಟ್ಟು ಬೇರೆ ದೇಶಕ್ಕೆ ಹೋಗುತ್ತಿದ್ದಾರೆ. ಇಲ್ಲಿ ಒಬ್ಬ ಡಾಕ್ಟರ್ ಅನ್ನು ನೀವು ತಯಾರು ಮಾಡುವುದಕ್ಕೆ how much Government is spending? ಒಬ್ಬ ಡಾಕ್ಟರ್ ಅನ್ನು produce ಮಾಡಬೇಕಾದರೆ, ಒಂದು ವರ್ಷಕ್ಕೆ 5 ಲಕ್ಷ ರೂಪಾಯಿಗಳಾಗುತ್ತದೆ. 5 ವರ್ಷಕ್ಕೆ 25 ಲಕ್ಷ ರೂಪಾಯಿಗಳಾಗುತ್ತದೆ. Your are spending Government money, that means public money. Public money means whose money? It is a common man's money. ಆ ಸಾಮಾನ್ಯ ಮನುಷ್ಯನ ಬೆವರಿನಿಂದ ಉತ್ಪತ್ತಿಯಾದಂಥ ಹಣ 25 ಲಕ್ಷ ರೂಪಾಯಿಗಳನ್ನು ನೀವು ಖರ್ಚು ಮಾಡಿ ಒಬ್ಬ ಡಾಕ್ಟರ್ ಅನ್ನು ತಯಾರು ಮಾಡಿದರೆ, ಈ ದೇಶದಲ್ಲಿ ಆ ಸಾಮಾನ್ಯ ಮನುಷ್ಯನಿಗೆ ಆಸ್ಪತ್ರೆ ಇಲ್ಲ, ಮೆಡಿಸಿನ್ ಇಲ್ಲ. ಅವನು ಅಮೇರಿಕಾಕ್ಕೆ ಹೋಗುತ್ತಾನೆ. They are serving there. ಅವರ defense ಏನು? ನಮಗೆ ಇಲ್ಲಿ ಏನು ವ್ಯವಸ್ಥೆಗಳು ಇಲ್ಲ. ಅವರಿಗೆ ಏನು ವ್ಯವಸ್ಥೆ ಗೊತ್ತೇನು? ಅವರು ಕೇಳಿದಷ್ಟು ಸಂಬಳವನ್ನು ನೀವು ಕೊಡುವುದಿಲ್ಲ.

ಡಾ॥ ವಿ.ಎಸ್. ಆಚಾರ್ಯ: ಒಂದೇ ಒಂದು ಕರೆಕ್ಷನ್. ರೆಕಾರ್ಡ್‌ಗೆ ಸರಿಯಾಗಿ ಹೋಗಲಿ ಎನ್ನುವ ಉದ್ದೇಶದಿಂದ ಹೇಳುತ್ತಿದ್ದೇನೆ. ಡಾಕ್ಟರ್‌ಗಳ ಮಟ್ಟಿಗೆ ಹೇಳುವುದಾರೆ, ಅವರು ವಿದೇಶಗಳಿಗೆ ಹೋಗುವುದು, higher education, research and extra special training ಗಾಗಿಯೇ ಹೊರತು employment ಗೆಂದು ಅಮೇರಿಕಾಕ್ಕೆ ಮತ್ತು ಹೊರದೇಶಗಳಿಗೆ ಹೋಗುವಂಥವರ ಸಂಖ್ಯೆ ಬಹಳ ಕಡಿಮೆಯಾಗಿದೆ.

ಶ್ರೀ ಸಿದ್ದರಾಮಯ್ಯ: ಅದನ್ನು ನಾನು ಒಪ್ಪುವುದಿಲ್ಲ. ಅವರು ಏಕೆ ಹೋಗುತ್ತಿಲ್ಲ ಎಂದರೆ, ಅಮೇರಿಕಕ್ಕಾಗಲೀ ಅಥವಾ ಯುರೋಪ್ ಕಂಟ್ರಿಗಳಿಗಾಗಲೀ ಡಾಕ್ಟರ್‌ಗಳು

ಬೇಕಾಗಿಲ್ಲ. ಅವರಿಗೆ ಬೇಕಾಗಿರುವುದು paramedical force ಮಾತ್ರ. ಈಗ ಅಲ್ಲಿರುವ ಡಾಕ್ಟರ್‌ಗಳೆಲ್ಲ ವಾಪಸ್ಸು ಬರಲು ಶುರು ಮಾಡಿಬಿಟ್ಟಿದ್ದಾರೆ. ಹಾಗಾಗಿ ಅಲ್ಲಿಗೆ ಹೋಗುತ್ತಿಲ್ಲ. ಆದರೆ ಹೋಗುವವರೆಲ್ಲ ಕೆಲಸಕ್ಕಾಗಿಯೇ ಹೋಗುತ್ತಾರೆ. ಅವಕಾಶ ಸಿಕ್ಕಿದವರೆಲ್ಲ ಹೋಗುತ್ತಾರೆ. ಇಂಜಿನಿಯರುಗಳೆಲ್ಲ ಅಲ್ಲಿಗೆ ಏಕೆ ಹೋಗುತ್ತಾರೆ? ನಮ್ಮ ದೇಶವನ್ನು ಉದ್ಧಾರ ಮಾಡಲು ಹೋಗುತ್ತಾರೆಯೇ?

ಡಾ॥ ವಿ.ಎಸ್. ಆಚಾರ್ಯ: ನಮ್ಮ ದೇಶಕ್ಕೆ ಇರುವಂಥ ಒಂದು advantage ಎಂದರೆ trained youth force. 18 to 40 years age group ನವರು ನಮ್ಮ ದೇಶದಲ್ಲಿ 54 ಕೋಟಿ ಇದ್ದಾರೆ. ಇಷ್ಟು youth force ಇರುವುದು ಭಾರತದಲ್ಲಿ ಮಾತ್ರ. ಬೇರೆ ಯಾವ ದೇಶದಲ್ಲೂ ಇಷ್ಟು ದೊಡ್ಡ absolute number ಇಲ್ಲ. ಈಗ ಅವರಿಗೆ ನಾವು ಒಳ್ಳೆಯ exposure ಕೊಟ್ಟು prepare them as technocrat, medical, engineering paramedical and all. ಅದನ್ನು ಮಾಡಿದರೆ ಅನುಕೂಲವಾಗುತ್ತದೆ. ಆದರೆ ತಾವು ಹೇಳಿದ ಹಾಗೆ, including Radiologists extra training ಗಾಗಿ , extra skills ಪಡೆದುಕೊಳ್ಳಲಿಕ್ಕೆ research programme ಗಾಗಿ ಅತ್ಯಲ್ಪ ಸಂಖ್ಯೆ ಯಲ್ಲಿ ಹೋಗಿ ಬರಬಹುದೇ ವಿನಃ employment ಗಾಗಿ ಡಾಕ್ಟರ್‌ಗಳು ಹೊರದೇಶಗಳಿಗೆ ಹೋಗುತ್ತಿಲ್ಲ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ:– I won;t agree. ನಾನು ಇದನ್ನು ಒಪ್ಪುವುದಿಲ್ಲ. ಅವರು employment ಗಾಗಿಯೇ ಹೋಗುವುದು. ಅವರು ವಾಪಸ್‌ಸೇ ಬರುವುದಿಲ್ಲ. ಅಲ್ಲಿ ಕೆಲಸ ಸಿಗದಿದ್ದರೆ ಮಾತ್ರ ವಾಪಸ್ಸು ಬರುತ್ತಾರೆ.

ಶ್ರೀ ಸಿದ್ದರಾಮಯ್ಯ:–ಕೆಲಸ ಸಿಗದಿದ್ದರೆ ವಾಪಸ್ಸು ಬರುತ್ತಾರೆ. ಅಲ್ಲೇ ಕೆಲಸ ಸಿಕ್ಕಬಿಟ್ಟರೆ ಅವರು ವಾಪಸ್ಸು ಬರುವುದಿಲ್ಲ.

ಅಧ್ಯಕ್ಷರು: ಶ್ರೀರಾಮರೆಡ್ಡಿ:ಯವರೇ, ಮಾತನಾಡಿ, ದಯಮಾಡಿ ಬೇಗ ಮುಗಿಸಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:–ಡಾಕ್ಟರ್‌ಗಳನ್ನು ಉತ್ಪಾದನೆ ಮಾಡಿ ಹೊರದೇಶಗಳಿಗೆ ಕಳುಹಿಸುತ್ತಿದ್ದೇವೆ ಎಂದು ಹೆಮ್ಮೆ ಪಡುತ್ತಿದ್ದೀರಲ್ಲ ಆಚಾರ್ಯರವರೇ, ನಾನು ಹೇಳುವುದನ್ನು ಕೇಳಿ. ಅವರು ಬೇರೆ ದೇಶಗಳಿಗೆ ಹೋಗಲಿ. ನಮ್ಮ ದೇಶದಲ್ಲಿರತಕ್ಕಂಥ ಕೃಷಿ ಕಾರ್ಮಿಕನ, ಬಡ ರೈತನ ಆರೋಗ್ಯ ವ್ಯವಸ್ಥೆಯನ್ನು ನೋಡತಕ್ಕಂಥ ಡಾಕ್ಟರ್‌ಗಳನ್ನು ಕೊಟ್ಟು ಆಮೇಲೆ ಬೇರೆ ಕಡೆಗಳಿಗೆ ಕಳುಹಿಸಿ ನಮ್ಮ ದೇಶದಲ್ಲಿ ಇವತ್ತು ಡಾಕ್ಟರ್‌ಗಳ ಅವಶ್ಯಕತೆ ಇದೆ. ನಮ್ಮ ಹಳ್ಳಿಗಳಲ್ಲಿ ಡಾಕ್ಟರ್‌ಗಳಿಲ್ಲ. ನಮ್ಮ ಆಸ್ಪತ್ರೆಗಳಲ್ಲಿ ಡಾಕ್ಟರ್‌ಗಳಿಲ್ಲ. ನಮ್ಮ ಆಸ್ಪತ್ರೆಗಳಲ್ಲಿ ಕೆಲಸ

ಮಾಡಿಸುವುದನ್ನು ಬಿಟ್ಟು ಅವರು ವಿದೇಶಕ್ಕೆ ಹೋಗುವುದು ಹೆಮ್ಮೆ ಪಡತಕ್ಕಂಥ ವಿಚಾರ ಎಂದು ಹೇಳುವಿರಾ ನೀವು. ನಮ್ಮ ದೇಶದ ಜನರ ಹಣವನ್ನು ಖರ್ಚು ಮಾಡಿ ಡಾಕ್ಟರ್‌ಗಳನ್ನು ಇಂಜಿನಿಯರುಗಳನ್ನು ಮಾಡಿ ಅವರನ್ನು ಕಳುಹಿಸಬೇಕಾಗಿರುವುದು ವಿದೇಶಕ್ಕೆ serve ಮಾಡಲಿಕ್ಕೆ ಅಲ್ಲ. ಅವರು ವಿದೇಶಕ್ಕೆ ಹೋಗುವ ಬಗ್ಗೆ ನನ್ನದೇನೂ ವಿರೋಧವಿಲ್ಲ. ಆದರೆ, ನಮ್ಮ ದೇಶದ ಅವಶ್ಯಕತೆಗಳನ್ನು ಪೂರೈಸಿರುವಿರಾ? ನಮ್ಮ ದೇಶದಲ್ಲಿ ಅವರ ಅವಶ್ಯಕತೆ ಇದೆ. ನಾನು ಹೇಳುತ್ತಿರುವುದು ಇಷ್ಟೇ. ನಮ್ಮ ದೇಶದ ಜನರ ಹಣದಿಂದ ಡಾಕ್ಟರ್‌ಗಳಾದವರು ಇಂಜಿನೀಯರ್‌ಗಳಾದವರು ಬೇರೆ ದೇಶಗಳಿಗೆ ಹೋಗಬಾರದು ಎಂದು ನಾನು ಹೇಳುತ್ತಿಲ್ಲ. ಆದರೆ, ನಮ್ಮ ದೇಶದ ಅವಶ್ಯಕತೆಗಳನ್ನು ಪೂರೈಸದೇ, ನಮ್ಮ ಮನೆಯಲ್ಲಿ ನಾವು ಉಪವಾಸವಿದ್ದು, ಬೇರೆಯವರಿಗೆ ದಾನ ಕೊಡಿ ಎಂದು ಹೇಳುತ್ತೀರಲ್ಲ, ಇದನ್ನು ನಾವು ಒಪ್ಪಲಿಕ್ಕೆ ಆಗುವುದಿಲ್ಲ, We can't agree this. ನಮ್ಮ ದೇಶದ ಜನರಿಗೆ ಔಷದಿ, ಕೊಡಿ, ಡಾಕ್ಟರ್‌ಗಳನ್ನು ಕೊಡಿ, ಆಸ್ಪತ್ರೆ ಕೊಡಿ. ಆಮೇಲೆ ಅವರು ಎಲ್ಲಾದರೂ ಹೋಗಲಿ. ನಾವೇನು ಬೇಡ ಎಂದು ಹೇಳುವುದಿಲ್ಲ. ಹೋಗಲೇಬಾರದು ಎಂದು ನಾನು ಹೇಳುವುದಿಲ್ಲ. Now, the world is becoming a global village. We cannot restrict anybody. ಆದರೆ, ನಮ್ಮ ಅವಶ್ಯಕತೆಗಳನ್ನು ಪೂರೈಸಿದ್ದೇವೆಯೇ ಎಂದು ನೋಡಬೇಕು. ಯಾರಿಗೆ priority ಕೊಡುತ್ತಿದ್ದೇವೆ, ಯಾರಿಗೆ ನಾವು serve ಮಾಡುತ್ತಿದ್ದೇವೆ, ಯಾರ interest ನಲ್ಲಿ serve ಮಾಡುತ್ತಿದ್ದೇವೆ? This is the question. ಇದನ್ನು ತಾವು ದಯವಿಟ್ಟು ಅರ್ಥಮಾಡಿಕೊಳ್ಳಬೇಕು. ನಾವು ನಿಮಗೆ ಬೇರೇನು ಹೇಳುತ್ತಿಲ್ಲ.

ಈ ಸರ್ಕಾರದವರು ಹಿಂದುಳಿದವರ ಬಗ್ಗೆ, ದಲಿತರ ಬಗ್ಗೆ ಭಾರೀ ಮಾತನಾಡುತ್ತಾರೆ. ಎಲ್ಲರೂ ಅವರ ಬಗ್ಗೆ ಮಾತನಾಡುತ್ತಾರೆ. ಅವರ ಕಲ್ಯಾಣಕ್ಕಾಗಿ ನೀವು Social Welfare Department ಗೆ ಹಣವನ್ನು ಬಿಡುಗಡೆ ಮಾಡಿದ್ದೀರಿ. Social Welfare Department ನಲ್ಲಿ ಎರಡು ಭಾಗ ಮಾಡಿದ್ದಾರೆ. ಅವರ ಸಂಖ್ಯೆ ಎಷ್ಟು? ಅವರಿಗೆ ಕೊಡುತ್ತಾ ಇರತಕ್ಕಂಥ ಹಣವೆಷ್ಟು? ಹಾಗೇ ಕೊಟ್ಟಂಥ ಹಣ ನಿಜವಾಗಿಯೂ ಕೂಡ ಆ ಜನರಿಗೆ ಸೇರುತ್ತಿದೆಯೇ? ಇದು ನನ್ನ ಪ್ರಶ್ನೆ. ನಿಮ್ಮ ಲೆಕ್ಕದಲ್ಲೇ ಅವರು 18% ಇದ್ದಾರೆ. ಅವರಿಗೆ ನೀವು ಎಷ್ಟು ಬಜೆಟ್ ಕೊಟ್ಟಿದ್ದೀರಿ. ಕೊಟ್ಟಿರುವುದು ಕಡಿಮೆ. ಕೊಡುತ್ತಾ ಇರುವುದು ಕಡಿಮೆ. ಹಾಗೆ ಕೊಡುತ್ತಿರತಕ್ಕಂಥ ಹಣ ಕೂಡ ಸರಿಯಾಗಿ ಅವರಿಗೆ ಸೇರುತ್ತಿಲ್ಲ. ನೀವು ಅಂಕಿಅಂಶಗಳನ್ನು ತೆಗೆದು ನೋಡಿ For academic interest ಹೇಳುತ್ತಿದ್ದೇನೆ. ಸ್ವಾತಂತ್ರ್ಯ ಬಂದ ಮೇಲೆ ನಾವು ಎಷ್ಟು ಸಾವಿರ ಕೋಟಿ ರೂಪಾಯಿಗಳನ್ನು ಅವರ ಹೆಸರಿನಲ್ಲಿ ಈ ದೇಶದಲ್ಲಿ ಮತ್ತು ರಾಜ್ಯದಲ್ಲಿ

ಖರ್ಚು ಮಾಡಿದ್ದೇವೆ. ಎಷ್ಟು ಲಕ್ಷ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಅದರ ಪರಿಣಾಮ ಏನಾಗಿದೆ? ಏನಾದರೂ ಬೆಳವಣಿಗೆಯನ್ನು ಕಂಡಿದ್ದೇವೆಯೇ? ಅದರಲ್ಲಿ ಎಷ್ಟು ಪರ್ಸೆಂಟ್ ಬೆಳವಣಿಗೆಯನ್ನು ಕಂಡಿದ್ದೇವೆ ಅಂದರೆ, in the name of developing them, we are spending thousand thousands of crores of rupees, which is not reaching to them. ಅವರ ಹೆಸರಿನಲ್ಲಿ ನಾವು ತಿನ್ನುತ್ತಿದ್ದೇವೆ. ಯಾರ್ಯಾರು ತಿನ್ನುತ್ತಿದ್ದಾರೆ ಎನ್ನುವುದನೆಲ್ಲ ನಾನು ಹೇಳಲಿಕ್ಕೆ ಹೋಗುವುದಿಲ್ಲ. ಅದರ ಬದಲಿಗೆ ಅವರ ಮೂಲಭೂತ ಸಮಸ್ಯೆಗಳಿಗೆ ನಾವು address ಮಾಡಿದರೆ, ಈ ಹಣ ಪೋಲಾಗುತ್ತಿರಲಿಲ್ಲ. S.C./S.T. Corporation ನವರು ಒಂದು ಒಳ್ಳೆಯ ಯೋಜನೆಯನ್ನು ತಂದಿದ್ದರು. ಅದೇನೆಂದರೆ, ಭೂಮಿಯನ್ನು ಕೊಂಡುಕೊಂಡು ಅವರಿಗೆ ಕೊಡತಕ್ಕಂಥ ಯೋಜನೆ. It is a good programme. ನಿಜವಾಗಿಯೂ ಕೂಡ ಆ ಜನಾಂಗದವರಿಗೆ ಭೂಮಿ ಕೊಟ್ಟು, ನೀರು ಕೊಟ್ಟು, ಸಲಕರಣೆಗಳನ್ನು ಕೊಟ್ಟು ವ್ಯವಸಾಯ ಮಾಡಿಸಿದರೆ ಅವರಿಗೆ ನಿಮ್ಮ ದಯೆ ಬೇಕಾಗಿಲ್ಲ.

ಆ ಕೆಲಸವನ್ನು ಮಾಡಬೇಕು ಎಂದು ನೀವು ಒಂದು ಕಾರ್ಯಕ್ರಮವನ್ನು ಹಾಕಿದಿರಿ. ಭೂಮಿಯನ್ನು ಕೊಂಡುಕೊಂಡು S.C./S.T. ಜನಾಂಗದವರಿಗೆ ಕೊಡಬೇಕೆಂದು ಯೋಜನೆಯನ್ನು ಹಾಕಿದಿರಿ. ಆದರೆ ಇದು ಅರೆ ಮನಸ್ಸಿನಿಂದ ಮಾಡಿರತಕ್ಕಂಥ ಕಾರ್ಯಕ್ರಮ. ನಿಮಗೆ ಒಂದು ನಿರ್ದಿಷ್ಟ ಪ್ಲಾನ್ ಇಲ್ಲ. ಪ್ಲಾನ್ ಎಂದರೆ ಏನು? ಅವರು ಒಟ್ಟು ಎಷ್ಟು ಜನಸಂಖ್ಯೆ ಇದ್ದಾರೆ, ಅವರಲ್ಲಿ landless ಎಷ್ಟು ಇದ್ದಾರೆ, ಆ landless ಜನರಿಗೆ ಒಂದೊಂದು ಕುಟುಂಬಕ್ಕೆ ಕನಿಷ್ಟ ಎರಡೆರಡು ಎಕರೆ ಜಮೀನನ್ನು ತೆಗೆದುಕೊಂಡು ಅವರಿಗೆ ಕೃಷಿ ಮಾಡಲಿಕ್ಕೆ ಬೇಕಾಗಿರತಕ್ಕಂಥ infrastructure ಅನ್ನು ಕೊಡಬೇಕಾದರೆ ಎಷ್ಟು ದುಡ್ಡು ಖರ್ಚಾಗುತ್ತದೆ? ಒಂದೇ ವರ್ಷದಲ್ಲಿ ಎಲ್ಲರಿಗೂ ಕೊಡಲಿಕ್ಕೆ ಆಗುವುದಿಲ್ಲ. ಹಂತಹಂತವಾಗಿ ಇದನ್ನು ಹೇಗೆ ಜಾರಿ ಮಾಡಬಹುದು, ಇದಕ್ಕೆ ಎಷ್ಟು ಕೋಟಿ ಹಣ ಬೇಕಾಗುತ್ತದೆ, ಎನ್ನುವ ಯೋಜನೆಯನ್ನು ಮಾಡಲಿಲ್ಲ. ಅದಕ್ಕೆ ಸರಿಯಾದಂಥ ಒಂದು ಯೋಜನೆಯಿಲ್ಲ. ಸರಿಯಾದಂಥ implementing agency ಇಲ್ಲ. ಉದಾಹರಣೆಗಾಗಿ ಹೇಳುತ್ತೇನೆ, ಈ ಯೋಜನೆಯಲ್ಲಿ ನಮ್ಮ ಜಿಲ್ಲೆಯಲ್ಲೇ ಸುಮಾರು ಕಡೆ ಭೂಮಿಯನ್ನು ತೆಗೆದುಕೊಂಡಿದ್ದಾರೆ. ಆದರೆ ಇವತ್ತಿಗೂ ಅದು registration ಆಗಿಲ್ಲ, ಇವತ್ತಿಗೂ ಅವರ

ಹೆಸರಿನಲ್ಲಿ ಖಾತೆ ಮಾಡಿಲ್ಲ, ಕೆಲವರಿಗೆ ಹಣ ಕೊಟ್ಟಿಲ್ಲ, ಕೆಲವರಿಗೆ ಭೂಮಿ ಕೊಟ್ಟಿಲ್ಲ. ಯೋಜನೆ ಮಾತ್ರ ಪೇಪರ್‌ನಲ್ಲಿದೆ. ಈ ಯೋಜನೆಗಾಗಿ ಭೂಮಿಯನ್ನು ಮಾರುವವರಿಗೆ ಕೂಡ ಬಹಳ ಕಡಿಮೆ ರೇಟನ್ನು ಕೊಡುತ್ತಿದ್ದೀರಿ. ಆದರಿಂದ ಮಾರುವವನಿಗೂ ಪ್ರಯೋಜನವಿಲ್ಲ, ಕೊಂಡುಕೊಳ್ಳುವವನಿಗೂ ಪ್ರಯೋಜನವಿಲ್ಲ, ಸರ್ಕಾರದಲ್ಲಿ ಹಣ ಮಾತ್ರ ಖರ್ಚಾಗುತ್ತಿದೆ. ಇಂಥ ಯೋಜನೆಗಳನ್ನು, ಅವರ ಹೆಸರಿನಲ್ಲಿ ನೀವು ಎಷ್ಟು ವರ್ಷ ಮುಂದುವರೆಸಿಕೊಂಡು ಹೋಗುತ್ತೀರಿ? ಆ ಜನಾಂಗದ ಹೆಸರು ಹೇಳಿಕೊಂಡು ಹಣವನು ಲೂಟಿ ಹೊಡೆಯಲಿಕ್ಕೇ ಇಂಥ ಕಾರ್ಯಕ್ರಮಗಳನ್ನು ಹಾಕತಕ್ಕಂಥಾದ್ದು. ನಿಮಗೆ ಪ್ರಮಾಣಿಕವಾದಂಥ ಕಾಳಜಿ ಇದ್ದರೆ, ಭೂಮಿ ಕೊಂಡುಕೊಂಡು ಅವರಿಗೆ ಕೊಡತಕ್ಕಂಥ ಯೋಜನೆಯನ್ನು ಸರಿಯಾಗಿ ವ್ಯವಸ್ಥೆ ಮಾಡಿ. ಅದರಿಂದ ಅವರು ನಿಜವಾಗಿ ಬದುಕಲಿಕ್ಕೆ ಆಗುತ್ತದೆ. ಅದಕ್ಕೆ ಬೇಕಾದಂಥ infrastructure ಕೊಡಿ. ಸರಿಯಾದಂಥ ಲೆಕ್ಕಾಚಾರ ಹಾಕಿಸಿ, ಯೋಜನೆ ರೂಪಿಸಿ. ಅದು ಇವತ್ತು ಬೇಕಾಗಿರತಕ್ಕಂಥಾದ್ದು. ಹಿಂದುಳಿದವರಿಗಾಗಿ 20 ಮೊರಾರ್ಜಿ ದೇಸಾಯಿ ಶಾಲೆಗಳನ್ನು ಮಾಡುತ್ತೇವೆ ಎಂದು ಹೇಳಿದಿರಿ. ಆದರೆ ಎಷ್ಟು ಮಾಡಿದ್ದಿರಿ? 20 ಶಾಲೆಗಳನ್ನು ಸ್ಥಾಪನೆ ಮಾಡುತ್ತೇವೆ ಎಂದು ಬಜೆಟ್‌ನಲ್ಲಿ ಹೇಳಿ, ಇಡೀ ರಾಜ್ಯದಲ್ಲಿ ಐದು ಮಾತ್ರ ಸ್ಥಾಪನೆ ಮಾಡಿದ್ದೀರಿ. ಅಂದರೆ, ಇದನ್ನು ಜಾರಿ ಮಾಡಲು ನಿಮ್ಮ ಪ್ರಮಾಣಿಕತೆ ಎಲ್ಲಿದೆ? ಸುಮ್ಮನೆ ಹೆಸರಿಗೆ ಇವುಗಳನ್ನೆಲ್ಲ ಹೇಳಲಿಕ್ಕೆ ಹೋಗಬೇಡಿ ದಯವಿಟ್ಟು, ನಿಮಗೆ ಪ್ರಮಾಣಿಕತೆಯಿದ್ದರೆ ಅವುಗಳನ್ನು ಜಾರಿ ಮಾಡಿ. ಆದ್ದರಿಂದ, ಬೇಡಿಕೆಗಳ ಮೇಲೆ ಹಣವನ್ನು ಮಂಜೂರು ಮಾಡಬೇಕು ಎಂದೇನು ಈ ಸರ್ಕಾರ ಕೇಳಿದೆ, ಈ ಸರ್ಕಾರಕ್ಕೆ ಖಂಡಿತವಾಗಿ ಅರ್ಹತೆ ಇಲ್ಲ. ಆಡಳಿತ ಯಂತ್ರಾಂಗವನ್ನು ನಿಯಂತ್ರಣ ಮಾಡತಕ್ಕಂಥ ಶಕ್ತಿ ಇಲ್ಲ ಎಂದು ನಾನು ಪ್ರಾರಂಭದಲ್ಲೇ ಹೇಳಿದೆ ಉದಾಹರಣೆ ಹೇಳಿದೆ. ಆರು ತಿಂಗಳಾದರೂ ಸರ್ಕಾರದಿಂದ ಒಂದು ಲೆಟರ್‌ಗೆ ಉತ್ತರ ಬರುವುದಿಲ್ಲ, ತೀರ್ಮಾನ ಆಗುವುಧಿಲ್ಲ, ಮಂತ್ರಿಗಳು ಹೇಳುವುದನ್ನು ಕೇಳುವುದಿಲ್ಲ, ಆಡಳಿತ ಯಂತ್ರಾಂಗ ಕುಸಿದಿದೆ, ಅಭಿವೃದ್ಧಿ ಸ್ಥಗಿತವಾಗಿದೆ, ಜನರ ಜೀವನ ಉತ್ತಮವಾಗಲಿಕ್ಕೆ ಸಾಧ್ಯವಾಗಿಲ್ಲ. ಆದ್ದರಿಂದ ಯಾವುದೇ ಕಾರಣಕ್ಕೂ ಕೂಡ ಇವರಿಗೆ ಈ ಹಣ ಖರ್ಚು ಮಾಡತಕ್ಕಂಥ ಶಕ್ತಿ ಇಲ್ಲ. ಅದನ್ನು ಮಂಜೂರು ಮಾಡಲಿಕ್ಕೆ ಆಗುವುದಿಲ್ಲ ಎಂದು ಹೇಳಿ ನನ್ನ ಮಾತಗಳನ್ನು ಮುಗಿಸುತ್ತಿದ್ದೇನೆ.

ಅಧ್ಯಕ್ಷರು: ಯಡಿಯೂರಪ್ಪನವರೇ, ಈಗ ನಿಮ್ಮ ಮಧ್ಯಮಾವಧಿ ವಿತ್ತೀಯ ಯೋಜನೆಯನ್ನು ಮಂಡನೆ ಮಾಡಿಬಿಡಿ.